ಕೊರವಂಜಿ

Koravanji

ಅಕ್ಟೋಬರ್

೧೯೬೨



★

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು:

ಶ್ರೀಮತಿ|| ಹಿಂದೀ ಪಂಡಿತಿ

ಶ್ರೀ || ಪ್ರಸಾದ್

ಶ್ರೀ|| ಅಷ್ಟಾವಕ

ಶ್ರೀ|| ರಾಮಿ

ಶ್ರೀ|| ಕೆ. ಎನ್. ಕಿಟ್ಟನ್


ಶ್ರೀ|| " ಕೇಫ. "

ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ ಇತ್ಯಾದಿ

ಬಿಡಿ ಪ್ರತಿ ಕೇವಲ ನಾಲ್ಕಾಣೆ

ತಿಳಿನಗೆಯ ಮಾಸಪತ್ರಿಕೆ



Koravanji, October 1952

ಕೊರವಂಜಿ

ಸಂಪುಟ ೨೧ ಅಕ್ಟೋಬರ್ ೧೯೬೨ ಸಂಚಿಕೆ ೭

★ ಕುಹಕಿಡಿಗಳು ★

ರಾಜಾಜಿಯವರು ಅಮೆರಿಕಾಕ್ಕೆ ಮೊದಲ ಸಾರಿಗೆ ಹೋಗಿ ಅಣುಬಾಂಬು ನಿಷೇಧಿಸಬೇಕು ಎಂದು ಪ್ರಚಾರ ನಡೆಸುವರಂತೆ.

—ಅಲ್ಲಿಗೆ ಹೋಗಿ, ಆ ವಯಸ್ಸಿನಲ್ಲಿ ಅಲ್ಲಿನ ನಿಶಿಪ್ರದರ್ಶನಗಳನ್ನು ನೋಡಿದರೆ ಅಣುಬಾಂಬು ಬೀಳುವುದು ಒಳ್ಳೆಯದು ಎಂದೂ ಪರಿವರ್ತನೆ ಹೊಂದುತ್ತಾರೇನೋ ಎಂಬ ಸಂಶಯವು ಸಾಧಾರಣವಾದುದು!

* * * *

೭೪ರ ಚಾರ್ಲಿ ಚಾಪ್ಲಿನ್ ಅವರಿಗೆ ಕೆಲವು ದಿನಗಳ ಹಿಂದೆ ಈ ವರ್ಷದ ಮಗುವು ಪ್ರಾಪ್ತವಾಯಿತಂತೆ.

—ಮಿತ ಸಂಸಾರದ ಭಿತ್ತಿ ಪತ್ರಿಕೆಗಳನ್ನು ಓದಿದಮೇಲೆ ಹೀಗೆ ಆಯಿತು ಎಂದವರು ನಕ್ಕರಂತೆ!

* * * *

ಕ್ಯೂಬಾದ ರಕ್ಷಣಾದಳದವರಿಗೆಲ್ಲಾ ರಷ್ಯನ್ ಭಾಷೆಯು ಚೆನ್ನಾಗಿ ಬರುತ್ತದೆ ಎಂದು ವರದಿಯಾಗಿರುವುದು ಖಚಿತವಾಗಿಲ್ಲವಂತೆ.

* * * *

ದ್ರೌಪದಿ ವಸ್ತ್ರಾಪಹರಣದ ಅಂಕದ ಮೊದಲು ಹಾಸ್ಯ ನಟರನ್ನು ರಂಗದ ಮೇಲಕ್ಕೆ ಕಳಿಸಿದರೆ ಪಾಪ! ಆ ನಟರು ಹೇಗೆತಾನೆ ಯಶಸ್ವಿಯಾಗಲು ಸಾಧ್ಯ ಎಂದು,

—ಹಾಸ್ಯನಟರೊಬ್ಬರು ಅಚ್ಚಾದ ವಿವಿಧ ವಿನೋದಾವಳಿಯ ಭಿತ್ತಿ ಪತ್ರವನ್ನು ಹಿಡಿದುಕೊಂಡು ಬಾಯಿಬಡಿದುಕೊಂಡರಂತೆ!

ಪಂಡಿತಜೀಯವರ ಆರೋಗ್ಯವು ಸಮರ್ಪಕವಾಗಿದೆ ಎಂದು ವಿಲಾಯ್ತಿ ವೈದ್ಯರು ಭರವಸೆ ಕೊಟ್ಟಿದ್ದಾರೆ

—ನಮ್ಮ ಪುಣ್ಯ! ಅಕ್ರಾಕ್ಕೆ ಹೋಗಿ ದೇಹಸ್ಥಿತಿಯನ್ನು ಕೆಡಿಸಿಕೊಳ್ಳುವ ಪ್ರಮೇಯವು ಸದ್ಯಕ್ಕೆ ತಪ್ಪಿ ಹೋಯಿತಲ್ಲಾ !!

* * * *

ಮೊನ್ನೆಯದಿನ ಸೆನ್ಸಾರ್ ಅವರು ಕತ್ತರಿ ಪ್ರಯೋಗಮಾಡಿದ ಚಿತ್ರದ ಭಾಗವು ಮನುಷ್ಯರದಲ್ಲ; ಖಾಜುರಹೋ ಕೆತ್ತನೆ ಶಿಲ್ಪಗಳು ಎಂದು ಚಿತ್ರ ನಿರ್ಮಾಪಕರು ಹೇಳಿದರೂ ಪ್ರಯೋಜನವಾಗಲಿಲ್ಲವಂತೆ.

* * * *

ಅಭೂತಪೂರ್ವ ಸ್ವಾಗತವು ನೈಜೀರಿಯಾದಲ್ಲಿ ಪ್ರಧಾನಿ ನೆಹ್ರೂಜೀಯವರಿಗೆ ದೊರಕಿದುದರಿಂದ ಅವರು ಅಲ್ಲೇ ಉಳಿದುಕೊಳ್ಳಲಿ ಎಂದು

—ಪ್ರಧಾನಿ ಚಾ ಎನ್ ಲೈ ಅವರು ಸಲಹೆ ಮಾಡಬೇಕೆಂದಿರುವರಂತೆ.

* * * *

ರಾಜ್ಯಪಾಲರುಗಳು ಜಾತಿ, ಲಿಂಗ, ಮತ ಭೇದವಿಲ್ಲದೆ ಕೊಕ್ಕಾಟ ಆಡುವರಂತೆ.

— ಭಾವ ಭಾವಮೈದುನರ ಐಕ್ಯ !!

* * * *

ಖಂಡೋಜಿರಾಯರ ಉಬ್ಬಸವು ಈ ಸರ್ತಿ ಮಳೆಗಾಲದಲ್ಲಿ ಬರಲೇ ಇಲ್ಲವಂತೆ !!

—ಹೊಸ ತೆರಿಗೆಗಳನ್ನು ವಿಧಿಸಿದಾಗಲೇ ಅವರ ಉಸಿರೆಲ್ಲವೂ ಕಟ್ಟಿ ಹೋಯಿತಂತೆ. ಇನ್ನು ಉಬ್ಬಸಕ್ಕೆ ಎಲ್ಲಿ ಅವಕಾಶ ?

* * * *

ತ್ರಿಭುವನ್ ಚಕ್ರವರ್ತಿಯವರು ಪೀಕಿಂಗ್‌ನಿಂದ ಪಡೆದ ಅಮೆರಿಕಾದ ಡಾಲರ ನಿಧಿಯನ್ನು ಅಮೇರಿಕಾದಲ್ಲೇ ತಮ್ಮ ಹೆಂಡತಿ ಮಕ್ಕಳ ಹೆಸರಿನಲ್ಲಿ ಭದ್ರಮಾಡಿದ್ದಾರೆ ಎಂದೆನ್ನುವುದು ಸತ್ಯವಾಗಿರಬಹುದಾದರೂ ಖಚಿತವಾಗಿಲ್ಲವಂತೆ !!

* * * *

ರಾಜಧಾನಿಯ ಸರ್ಕಸ್ ಪ್ರದರ್ಶನವೊಂದರಲ್ಲಿ ಕ್ರೂರ ಮೃಗಗಳ ಅಂಕದಲ್ಲಿ ಯಜಮಾನನು " ಲೇ ! " ಎಂದು ಕೂಗುತ್ತಾನಂತೆ

ಆಗ ಸಿಂಹಿಣಿಯೊಂದು ಹಾರಿ ಬಂದು ಮುಕ್ಕಾಲು ಮಣೆಯಮೇಲೆ ಕೂತುಕೊಳ್ಳುತ್ತದಂತೆ.

—ಇದೇನು ಮಹಾ ಸರ್ಕಸ್ ! ಎಲ್ಲ ಮನೆಗಳಲ್ಲೂ ದಿನಾಗಲೂ ಆಗೋದೇ !!!

ಅಲ್ಲಾ! ಅಂದ್ರೆ!!

ಪುಸ್ತಕವೊಂದನ್ನು ಓದುತ್ತಾ ರಾತ್ರಿ ಹನ್ನೆರಡು ಗಂಟೆಯ ಹೊತ್ತಿನಲ್ಲಿ ಶಚಿದೇವಿಯು ನಕ್ಕಳಂತೆ.

ಆಗ ದೇವೇಂದ್ರನು ಮಲಗಲೋಸುಗ ಮನೆಗೆ ಬಂದಿದ್ದನಂತೆ ಹೆಂಡತಿಯು ಪ್ರಸನ್ನಳಾಗಿ ನಗ್ತಾ ಇರುವುದನ್ನು ಕಂಡು,

" ಲೇ! ಮಧ್ಯಾಹ್ನ ಮಾಡಿದ್ದ ಬೆಂಡೆಕಾಯಿ ಗೊಜ್ಜು ಏನಾದರೂ ಉಳಿದಿದೆಯೇನೇ? ಆಸ್ಥಾನದಲ್ಲಿ ತುಂಬಾ ಕೆಲಸ ಇತ್ತು. ಅವತ್ತಿನ ಕೆಲಸ ಅವತ್ತೇ ಮುಗಿಸಬೇಕು ಎಂದು ಕೂತೆ. ಹೊತ್ತಾಯ್ತು! ಹಸಿವಾಗ್ತಾ ಇದೆ" ಎಂದನಂತೆ.

ಏನಂದ್ರಿ!! "ಆ್ಞ"!! ಅಂತ ಶಚಿದೇವಿ ಹಾಸಿಗೆಮೇಲೆ ಕೂತಳಂತೆ

ಯಾವುದೇ ಅದು ಪುಸ್ತಕ ಅಷ್ಟು ಆಸಕ್ತಿಯಿಂದ ಇಷ್ಟು ಹೊತ್ತಾದರೂ ಓದುತ್ತಾ ಇಧೀ" ಎಂದನಂತೆ ದೇವೇಂದ್ರ.

" ಇಪ್ಪತ್ತುಸಾವಿರ ಅಪ್ಸರೆಯರು ಒಪ್ಪತ್ತಿಗಾದರೂ ಬೇಡುವ ಅವ" ಎಂಬ ಪುಸ್ತಕ ಅಂದ್ರೆ ಬಲು ಚೆನ್ನಾಗಿದೆ, ಸ್ವಾರಸ್ಯವಾಯ ಎಂದಳಂತೆ ಶಚಿ.

" ಅಂದರೆ! ನನ್ನನ್ನು ಕುರಿತ ಪುಸ್ತಕವೇನೇ ?"

ಎಂದು ದೇವೇಂದ್ರನು ಉದ್ಗಾರ ತೆಗೆದನಂತೆ.

" ಇರಬೇಕು ಅಂದ್ರೆ! ನಿಮ್ಮನ್ನು ನೋಡೇ ಈ ಪುಸ್ತಕಾನ ಬರೆದಿರಬೇಕು ಅಂತ ಶಚಿದೇವಿ ಎದ್ದು ಅಡಿಗೆಮನೆಯ ಕಡೆಗೆ ಹೋದಳಂತೆ ಖುಷಿಯಾಗಿ ದೇವೇಂದ್ರ ಮಲಗಿ ನಿದ್ರೆ ಹೋದನಂತೆ.

ಬಿಸಿಯಾಗಿದ್ದ ಬೆಂಡೆಕಾಯಿ ಗೊಜ್ಜನ್ನು ಅನ್ನದ ಜತೆಗೆ ಕಲಸಿ ಬಾಗಿಲಲ್ಲಿದ್ದ ನಾಯಿಗೆ ಹಾಕಿ, ಪಾತ್ರೆ ತೊಳೆದು, ಶಚಿದೇವಿ ಹಿಂತಿರುಗಿ ಬಂದು, ಗೊರಕೆ ಹುಯ್ಯುವ ಗಂಡನಿಗೆ ಶಾಲು ಹೊದ್ದಿಸಿ, ತಾನೂ ಮಲಗಿದಳಂತೆ.

* * * *

ಎಂಥ ಹೆಚ್ಚು ಕೆಲಸಮಾಡಿಕೊಂಡೆ ಅಂತಿ ಅಂದನಂತೆ ಭೀಮ. ಆ ವರ್ಷ ಅವನ ಸರದಿ. ಆ ದಿನ ಮೊದಲದಿನ.

ಅಂಥಾದೇನು ಹೆಚ್ಚು ಕೆಲಸಮಾಡಿದಿರಿ ಅಂದ್ರೆ ಅಂದಳಂತೆ ದ್ರೌಪದಿ.

ನಿನ್ನೆದಿನ ಕಾಡಿನಲ್ಲಿ ಹೋಗ್ತಾ ಇದ್ದೆ. ಅಲ್ಲೆಲ್ಲಾ ರಾಕ್ಷಸರಿದಾರೆ ಹುಷಾರಾಗಿರಿ ಅಂತ ಜನ ಹೇಳಿದ್ದರು ನಂಗೇನು ಭಯ ಅಂತ ಧೈರ್ಯದಿಂದ ಹೋದೆ ಅಲ್ಲೊಬ್ಬಳು ರಾಕ್ಷಸಿ ಎದುರು ಬಿದ್ದಳು.

" ಹ್ಞಾ " ಅಂದ್ರೆ ; ಮುಂದೆ ? " ಅಂದಳು ದ್ರೌಪದಿ.

" ನಾನೂ ಹ್ಞಾ ಅಂದೆ ; ನೀನು ಈಗ ಅಂದೆಯಲ್ಲಾ ಹಾಗೇನೇ" ಎಂದನಂತೆ ಭೀಮಸೇನ.

" ಅಷ್ಟೇತಾನೆ ಅಂದ್ರೆ" ಎಂದಳಂತೆ ಪಾಂಚಾಲಿ.

ಹಿಂದಿ ಬೆಳೆಯಲಿ

ಓಬಲಾಪುರದಲ್ಲಿ ಗಲಾಟೆಯೋಗಲಾಟೆ. ಪ್ರೈಮರಿಶಾಲಾ ರಸ್ತೆಯಲ್ಲಿ ಅದೂ ಭಾನುವಾರ ರಜಾ ದಿನ ಊರ ಧಡೂತಿ ಆಸಾಮಿಗಳು ಬೆಳಿಗ್ಗೆ ಒಂಭತ್ತರ ಹೊತ್ತಿನಲ್ಲಿ ಹೋಗುತ್ತಿದ್ದರೆ, ಜನರಿಗೆ ಕುತೂಹಲ.

"ಓಹೋಹೋ ಪಂಡಿತ ಸೀನಪ್ಪನವರು ಕಣ್ರೋ! ಲಾಯರು ವೆಂಕಪ್ಪನವರು ಇದಾರ್ರೋ! ಎಲಎಲಾ ಮುನ್ಸಿಪಾಲ್ಟಿ ಹನುಮಯ್ಯ ಕೂಡ ನಡೀತಿದಾನಲ್ರೋ. ಅರೆ ಅಲ್ಲಿನೋಡಿಪ್ಪಾ ರಾಮಮಂದಿರದ ಸೂರಯ್ಯನೋರುಕೂಡ ಲೇಖಣಿ ಕಾಗದದ ರಟ್ಟಿನ ಅಟ್ಟೆ ಹಿಡಿದುಕೊಂಡು ಶಾಲೆಗೆ ಹೋಗ್ತಿದಾರಲ್ಲಾ" ಎಂದು ಹುಡುಗರು ಅರೆಬಾಯಿ ತೆರೆದು ವೀಕ್ಷಿತ ವಿವರಣೆಯನ್ನು ಕೊಡುತ್ತಿದ್ದರು.

ಇದರ ಮರ್ಮ ಇಷ್ಟೇ! ಹಿಂದಿ ಮಾಸ್ತರು ಕಾಳಿಂಗರಾಯರು ಓಬಲಾಪುರಕ್ಕೆ ಬಂದು ಹೊಟ್ಟೆಪಾಡಿಗೆ ಹಿಂದಿ ತರಗತಿಗಳನ್ನು ಶುರುಮಾಡಿದರು. ಒಬ್ಬೊಬ್ಬರ ಮನೆಗೂ ಹೋಗಿ ಪ್ರಚಾರಮಾಡಿದರು "ಹಿಂದಿ ಕಲಿತರೆ ಮುಂದಕ್ಕೆ ಒಳ್ಳೆಯದು, ಕಾಶೀಯಾತ್ರೆಗೆ ಹೋದರೆ ಈ ಭಾಷೆಯಿಂದ ಅನುಕೂಲ. ದಿಳ್ಳೀಗೆ ಹೋದರೆ ಅಲ್ಲಿನ ದೇವರುಗಳು ಇದೇ ಭಾಷೇಲೇ ಮಾತನಾಡೋದು. ಅಲಕನಂದಾದಲ್ಲಿ ಸ್ನಾನ ಮಾಡೋವಾಗ ಹಿಂದಿ ಮಂತ್ರ ಹೇಳಿದರೆ ಘಂಡರ ಕಾಟ ತಪ್ಪುತ್ತೆ ಎಂದೆಲ್ಲಾ ಅವರುಗಳ ಮನೆಗೆ ಹೋಗಿ ಪುಸಲಾಯಿಸಿದರು. ಏನೂ ಉತ್ತೇಜನ ದೊರಕಲಿಲ್ಲ. ಕಡೆಗೆ ಬ್ರಹ್ಮಾಸ್ತ್ರವನ್ನು ಉಪಯೋಗಿಸಬೇಕಾಯ್ತು. ಉಪಯೋಗಿಸಿಯೇ ಬಿಟ್ಟರು.

ಹಿಂದಿ ಪರೀಕ್ಷೇಲಿ ಉತ್ತೀರ್ಣರಾದರೆ ಹಿಂದಿ ಸಂಘದ ಅಧ್ಯಕ್ಷರಾದ ಮುಜರಾಯಿ ಹಾಗೂ ಸಹಕಾರಸಚಿವರು ಈ ಊರಿಗೆ ಬಂದು ಸ್ವಯಂ ತಮ್ಮ ಅಮೃತ ಹಸ್ತದಿಂದಲೇ ಪ್ರಶಸ್ತಿ ಪತ್ರಗಳನ್ನು ದಯಪಾಲಿಸುವರು ಎಂದರು ಹಾಗೂ ಆ ಮಧ್ಯಾಹ್ನ ತಾವು ಏರ್ಪಡಿಸಲಿರುವ ಭೋಜನ ಕೂಟದಲ್ಲಿ ಅಧ್ಯಕ್ಷರ ಸಹ ಪಂಕ್ತಿಯನ್ನು ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಕೊಡಿಸುವುದಾಗಿಯೂ ಭರವಸೆ ಇತ್ತರು.

ರಾಮಮಂದಿರದ ಸೂರಯ್ಯನವರಿಗೆ ತಮ್ಮ ಮಂದಿರಕ್ಕೆ ಮುಜರಾಯಿ ಗ್ರಾಂಟುಗಿಟ್ಟಿಸಬೇಕೆಂಬ ಹಂಬಲವಿತ್ತು ದುರಾಸೆಯಿತ್ತು. ವಯಸ್ಸು ಐವತ್ತಾ

ಗಿದ್ದರೂ ಕಲಿಯುಕ್ಕೆ ವಯಸ್ಸೇನು ಅಡ್ಡಿ ? ಹಾಗೂ ಕಾಶೀಯಾತ್ರೆಗೆ ರಾಮ ಮಂದಿರದ ಪರವಾಗಿ ಹೋಗಬೇಕಾಗಿ ಬಂದರೆ, ಹಿಂದಿ ಮಾಸ್ತರು ಹೇಳಿದಂತೆ ಹಿಂದಿ ಜ್ಞಾನವಿದ್ದರೆ ಒಳ್ಳೆಯದು ಎಂದು ಪಾಠಕ್ಕೆ ಶುರು ಮಾಡಿದ್ದರು. ಮುನಿಸ್ಪಾಲ್ಟಿ ಹನುಮಯ್ಯನಿಗೆ "ಮಂತ್ರಿಗಳುಕೂಡ ನನ್ನ ಹಂಗೇ ಮುನಿಸ್ಪಾಲ್ಟಿ ಅಧ್ಯಕ್ಷರಾಗಿದ್ದರು. ಏರುತ್ತ ಏರುತ್ತ ವಿಧಾನಸೌಧದ ಮೂರನೆ ಮಹಡಿ ಹತ್ತಿದರು ಹಾಗೇ ನಾನೂ. ಮಾಡಬೇಕು. ಹಿಂದಿ ಕಲಿತರೆ ಚೆಂದ ಕನ್ನಡದಾಗೆ ಹೆಂಗೂ ಮಾತಾಡ್ನಿಕ್ಕೆ ಬರುಲ್ಲ ಇಂದೀನೆ ಸೈ" ಅಂತ ಅನ್ನಿಸಿತು. ಬೆಳಗಾದರೆ ಐ ಓ ಊಂ ಅಂತ ಪಾಠಬೊಗಳುಕ್ಕೆ ಹಚ್ಚಿದ.

ಪಂಡಿತ ಸೀನಪ್ಪನವರಿಗೆ ಒಂದೇ ಆಸೆ. ಹೇಗಾರೂ ಮಾಡಿ ತಮ್ಮ ಆಯುರ್ವೇದ ಸಹಕಾರ ವೈದ್ಯಾಲಯಕ್ಕೆ ಸಹಕಾರ ಇಲಾಖೆಯಿಂದ ಆದಷ್ಟು ಹಣ ಸಾಲ ಪಡೆಯಬೇಕು ಅಂತ. ಅವರ ಸಹಕಾರ ವೈದ್ಯಾಲಯಕ್ಕೆ ಅವರ ಧರ್ಮ ಪತ್ನಿ ಹಾಗೂ ಔಷದಿ ಅರೆಯೋ ಕಾಂಪೌಂಡರು ಒಬ್ಬ ಡೈರೆಕ್ಟರು. ಮೂಲಿಕೆ ತರುವ ದೊಡ್ಡಮಗ ಇನ್ನೊಬ್ಬ ಡೈರೆಕ್ಟರು. ಲೇಹ ಕುದಿಸುವ ಮೊದಲ ಸೊಸೆಯೂ ಡೈರೆಕ್ಟರು. ತೈಲ ಇಳಿಸುವ ತಮ್ಮ ಮತ್ತೊಬ್ಬ ಡೈರೆಕ್ಟರು. ಮೊದಲು ಸಾಲ ಕೊಡಲಿ ಆಮೇಲೆ ಅದು ಯಾವ ಸರ್ಕಾರಾತಾನೇ ನಮ್ಮಿಂದ ವಾಪಸ್ಸು ಪಡೆಯುತ್ತೋ ನೋಡೋಣ. ಹೇಗೆ ಪಡೆಯುತ್ತೋ ನೋಡ್ತೀನಿ. ಆಗಾಗ್ಗೆ ಚುನಾವಣೆಗಳು ಬರ್‍ತಾನೇ ಇರುತ್ತೆ ಎಂದು ಭುಜದಮೇಲಿನ ಶಾಲನ್ನು ತಟ್ಟಿ ಕೊಳ್ಳುತ್ತಿದ್ದರು.

ಜತೆಯವರೆಲ್ಲಾ ಹಿಂದೀತರಗತಿಗಳಿಗೆ ಹೋಗಿ ಪಾಠ ಕಲಿಯುಕ್ಕೆ ಕೂತರೆ, ಪಾಪ, ಲಾಯರು ವೆಂಕಪ್ಪ ಏನುತಾನೇ ಮಾಡಿಯಾನು. ಅವನ ಜತೇಲಿ ಯಾರು ತಾನೇ ಇಸ್ಪೀಟು ಆಡುಕ್ಕೆ ಕುಳಿತುಕೊಳ್ಳುವವರು? ನೀವೆಲ್ಲಾ ತುಳಿದ ಅಡ್ಡ ಹಾದೀಲೇ ನಾನೂ ಕಾಲಾಡಿಸ್ತೀನಿ ಅಂತ ಅವರೂ ಹಿಂದೀ ಕಲೀಲಿಕ್ಕೆ ಶುರು ಹಚ್ಚಿದರು.

ರಾಮಮಂದಿರದಲ್ಲೇ ಪಾಠಗಳಾದುವು. ಮಾಸ್ತರು ಕಾಳಿಂಗರಾಯರು ಒಂದು ವಾಕ್ಯಕ್ಕೆ ಒಂದು ಅರ್ಥ ಹೇಳಿದರೆ ಐದೂ ಶಿಷ್ಯರುಗಳು ಐದು ಅಪಾರ್ಥಗಳನ್ನು ನುಡಿದು ಕಾಳಿಂಗರಾಯರ ಶಬ್ದ ಭಾಂಡಾರವನ್ನು ದೊಡ್ಡದು ಮಾಡುತ್ತಿದ್ದರು. ಹಾಗೂ ಹೀಗೂ ಆಡಿ ಬೇಡಿ ಮೂರು ತಿಂಗಳುಗಳಾಯ್ತು. ಪರೀಕ್ಷೆಯ ಹೊತ್ತು ಬಂತು. ಭಾನುವಾರ ಓಬಲಾಪುರದ ಪ್ರೈಮರಿ ಶಾಲೆಯಲ್ಲಿ ಪರೀಕ್ಷೆಯನ್ನು ಏರ್ಪಡಿಸ ಲಾಗಿತ್ತು. ಪ್ರೈಮರಿ ಶಾಲಾ ಹೆಡ್ಮಾಸ್ತರೇ ಎಲ್ಲ ಏರ್ಪಾಡನ್ನು ಮಾಡಬೇಕಾಗಿತ್ತು. ಅವರೇ ಮುಖ್ಯ ಉಸ್ತುವಾರರಾಗಿದ್ದರು.

ಆ ಚಿರಸ್ಮರಣೀಯ ಭಾನುವಾರದಂದೇ ಈ ಪ್ರಭೃತಿಗಳೆಲ್ಲರೂ ಓಬಲಾಪುರದ ಪ್ರೈಮರಿ ಶಾಲಾ ರಸ್ತೆಯಲ್ಲಿ ಪರೀಕ್ಷೆಗೆಂದು ಹೊರಟಿದ್ದರು. ರಸ್ತೆಯ ಅಕ್ಕಪಕ್ಕದ

ಮನೆಯ ಹುಡುಗರು ಸೇರಿ ವೀಕ್ಷಿತ ವಿವರಣೆಯನ್ನು ರಸವತ್ತಾಗಿ ಮಾಡು ತ್ತಿದ್ದರು.

ಅರ್ಧದೂರ ನಡೆದಿರಬಹುದು. ಒಬ್ಬ ಹುಡುಗ ಓಡೋಡಿ ಬಂದು "ಅಪ್ಪಯ್ಯಾ! ಈ ಕಾಗದಾನ ಮನ್ಯೇಲೆ ಮರೆತಿದ್ವಿರಂತೆ. ಅಮ್ಮ ಕೊಟ್ಟು ಬಾ ಅಂದಳು ತೊಗೊಳ್ಳಿ ಎಂದು ಏದುಬ್ಬಸ ಪಡುತ್ತ ಹೇಳಿದ. ಆ ಕಾಗದವೇ ಪರೀಕ್ಷೆಯ ಪ್ರವೇಶ ಪತ್ರ!

ಇನ್ನೊಬ್ಬ ಹುಡುಗ ಓಡಿಬಂದ. "ಅಜ್ಜಯ್ಯಾ ಅಪ್ಪ ಹೇಳಿದರು ಈ ಕಾಗದಾನ ಅಜ್ಜ ಮರೆತಿದ್ದಾರೆ ಓಡಿಹೋಗಿ ಕೊಟ್ಟು ಬಾ" ಅಂತ ಹೇಳಿಕೊಟ್ಟ.

ಮತ್ತೊಬ್ಬ ಹುಡುಗ ಓಡಿಬಂದ ಮಾವಯ್ಯಾ ನಶ್ಯದ ಡಬ್ಬೀನೆ ಮರೆತಿದ್ದ ರಂತೆ. ಪರೀಕ್ಷ್ಯೇಲಿ ತೊಂದರೆ ಆಗಬಹುದು ಅಂತ ಅತ್ತೆ ಕಳಿಸಿದರು ಎಂದು ನಶ್ಯದ ಡಬ್ಬೀನ ತಂದುಕೊಟ್ಟ.

ಪರೀಕ್ಷಾಮಂದಿರಕ್ಕೆ ಹೋದರು. ಪರೀಕ್ಷಾ ಅಂಗಳದಲ್ಲಿ ಪ್ರೈಮರಿ ಶಾಲೆಯ ಬೆಂಚುಗಳನ್ನು ವಾರಣವಾಗಿ ಹಾಕಿದ್ದರು. ಒಬ್ಬೊಬ್ಬರನ್ನು ಹೆಡ್ಡುಮಾಸ್ತರು ಸ್ವಾಗತಿಸಿ ಹಸ್ತಲಾಘವ ಕೊಟ್ಟು ಒಂದೊಂದು ಬೆಂಚಿನಮೇಲೆ ಒಬ್ಬೊಬ್ಬರನ್ನು ಕೂರಿಸಿದರು.

ಪ್ರಶ್ನ ಪತ್ರಿಕೆಗಳನ್ನು ಹಂಚಿದರು. ಮುನಿಸ್ಪಾಲ್ಟಿ ಹನುಮಯ್ಯ ಬರೆಯುಕ್ಕೆ ಶುರುಮಾಡಿದ. ಅವನಿಗೆ ಪ್ರಶ್ನ ಪತ್ರಿಕೆ ಓದುಕ್ಕೆ ಬಾರದೆ ಇದ್ದುದರಿಂದ ಬರೆಯುಕ್ಕೇ ಆರಂಭಿಸಿದ. ಮಧ್ಯೆ ಅನುಮಾನ ಬಂತು. ಪ್ರಶ್ನೆಗಳ ಸಂಖ್ಯೆಗೆ ಸರಿಯಾಗಿ ಉತ್ತರ ಬರೀತಿದ್ದೀನಾ ಅಂತ. ಯಾರನ್ನು ಕೇಳೋದು. ಕಾಳಿಂಗರಾಯರು ಅಲ್ಲಿಲ್ಲ ಕೋಪಬಂತು ಬರೆಯುತ್ತಿದ್ದ ಮೇಜನ್ನು ಕುಟ್ಟಿದ. ಅದು ಕಾಲುಮುರಿದುಕೊಂಡು ಲಟಲಟ ಅಂತ ಶಬ್ದ ಮಾಡ್ತಾಬಿತ್ತು.

ಎಂಥಾ ಬೇವರ್ಸಿ ಹೆಡ್ಡುಮಾಸ್ತರೋ! ಮುರಿದ ಮೇಜು ಹಾಕಿದ್ದೀ ಹೇಳಿ ಕಳಿಸಿದ್ದರೆ ಮುಸಿಪ್ಪಾಲ್ಟಿಯಿಂದ ಒಳ್ಳೇ ಮೇಜು ಕಳಿಸ್ತಿರಲಿಲ್ವಾ ಎಂದು ಪ್ರೈಮರಿ ಶಾಲಾ ಹೆಡ್ಡುಮಾಸ್ತರನ್ನು "ಮಾತ"ನಾಡಿಸಿದ. ಆ ಪ್ರೈಮರಿಶಾಲಾ ಮಾಸ್ತರಿಗೆ ಮುನಿಸ್ಪಾಲ್ಟಿಯಿಂದ ಬರುವ ಗ್ರಾಂಟೇ ಜೀವಾಳ, ಅವರು ಬೆವರೊರೆಸಿಕೊಂಡರು.

ರಾಮಮಂದಿರದ ಸೂರಯ್ಯನವರು ಬರೆಯುತ್ತಿದ್ದುದನ್ನು ನಿಲ್ಲಿಸಿ ಕೂತಿದ್ದ ಬೆಂಚಿನಮೇಲೆ ಭಾರವನ್ನು ಪೂರ್ತಿ ಬಿಟ್ಟು ಕುಳಿತರು. ಕಟಕಟ ಶಬ್ದ ಆಯ್ತು ಬೆಂಚು ಮುರಿದಿತ್ತು. ಪ್ರೈಮರಿ ಬಾಲಕರು ಕೂಡುವ ಹಗೂರು ಬೆಂಚಿನಮೆ ಲೆ ನೂರಾಐವತ್ತು ಕಿಲೋಗ್ರಾಮಿನ ಸೂರಯ್ಯನವರು ಕುಳಿತರೆ, ಅದೂ ಲಕ್ಷಣವಾಗಿ

ಕುಳಿತರೆ ಇನ್ನೇನುತಾನೇ ಆಗುತ್ತೆ! ಬಿದ್ದವರು ಬೇಗ ಏಳಲಾರದೆ ಇದ್ದಲ್ಲಿಂದಲೇ "ಯಾವ ಭಡವನೋ ಈ ಮುರುಕಲು ಬೆಂಚು ಹಾಕ್ದೋನು" ಅಂತ ಬೊಬ್ಬೆ ಇಟ್ಟರು.

ರಾಮಮಂದಿರದ ಭಜನಾದಿನಗಳಲ್ಲಿ ಘಟ ಬಾರಿಸಿಕೊಂಡು ಉಪ ಸಂಪಾದನೆ ಮಾಡಿಯೇ ಪ್ರೈಮರಿ ಹೆಡ್ಡುಮಾಸ್ತರು ಬದುಕುತ್ತಿದ್ದುದು. ಅವರಿಗೆ ಜೀವಾನೇ ಹೋದಂತಾಯಿತು. ಮನಸ್ಸು ಶೂನ್ಯವಾಯಿತು. ಬೆವರಿದರು ಗಾಳಿ ಹೆಚ್ಚಾಗಿ ಬೆ ಕಾಯ್ತು. ಹೊರಕ್ಕೆ ಓಡಿದರು.

ತಕ್ಷಣ ಕಾಳಿಂಗರಾಯರು ಪರೀಕ್ಷಾ ಅಂಗಳಕ್ಕೆ ನುಗ್ಗಿದರು. ಬಿದ್ದವರನ್ನೆಬ್ಬಿಸಿ ಕೂರಿಸಿದರು. ಎಲ್ಲಾ ಉತ್ತರಗಳನ್ನು ಬೇಗ ಬೇಗ ಬರೆಸಿದರು. ಬರೆದಿದ್ದನ್ನೆಲ್ಲಾ ಬೇಗಬೇಗ ತಿದ್ದಿದರು....

ಹೊರಕ್ಕೆ ಬಂದರು. ಸ್ವಾಮಿ! ಹೆಡ್ಮಾಸ್ತರೇ ಪರೀಕ್ಷೆಯಾಗಿ ಯಾವಕಾಲ ಬಂತು. ಉತ್ತರ ಪತ್ರಿಕೆಗಳನ್ನು ಇಸುಕೊಂಡು ಸರಿಯಾಗಿ ಭಾಂಗೀಮಾಡಿ ಪರೀಕ್ಷಕ ಸಮಿತಿಗೆ ಕಳಿಸಬೇಕು ಎಂದರು. ಹೆಡ್ಮಾಸ್ತರು ಬೆದರುತ್ತಾ ಹೆದರುತ್ತಾ ಬಂದು ನೆಲವನ್ನೆ ನೋಡುತ್ತ ವಿನಯದಿಂದ ಉತ್ತರದ ಪತ್ರಗಳನ್ನು ಸ್ವೀಕರಿಸಿದರು.

ಮುಂದಿನ ಕೆಲಸವನ್ನು ಮಾಡಿದರು.

ಪರೀಕ್ಷಾ ಪಟುಗಳೆಲ್ಲರೂ ಮನೆಗಳಿಗೆ ಹಿಂತಿರುಗಿದರು. ಕಾಳಿಂಗರಾಯರು ಬೆವರೊರೆಸಿಕೊಂಡರು. ಈ ವಿದ್ಯಾರ್ಥಿಗಳಿಗೆ ಹಿಂದಿ ಕಲಿಸದಿದ್ದರೆ ಅವರ ಹೊಟ್ಟೆ ಪಾಡು ನಡೆಯುವಂತಿಲ್ಲ. ಇವರೊಡನೆ ಏಗುವ ವೇಳೆಗೆ ಅವರ ಅಮ್ಮ ಇಟ್ಟ ಭಜೆ ಬೆಣ್ಣೆ ನೆನಪಿಗೆ ಬಂದಿತ್ತು.

* * * *

ಪರೀಕ್ಷೆಯ ಫಲಿತಾಂಶಗಳು ಪತ್ರಿಕೆಗಳಲ್ಲಿ ಪ್ರಕಟವಾದುವು. ಓಬಲಾಪುರದ ಪ್ರಾಥಮಿಕ ಪರೀಕ್ಷೆಗಳಲ್ಲಿ ಶತಾಂಶ ನೂರರಷ್ಟು ಅಭ್ಯರ್ಥಿಗಳು ಜಯಗಳಿಸಿದ್ದರು.

ಹಿಂದಿ ತರಗತಿಗಳನ್ನು ಇನ್ನೊಂದು ವರ್ಷ ನಡೆಸಬಹುದು ಅನ್ನುವ ಧೈರ್ಯ ಕಾಳಿಂಗರಾಯರಿಗೆ ಬಂದಿತು.

ಆ ಸಂಜೆಯೇ ಹನುಮಪ್ಪ ಕೇಳಿದ "ಯಾವಾಗ ನಮಗೆಲ್ಲಾ ಪ್ರಶಸ್ತಿ ಪತ್ರಗಳನ್ನು ಕೊಡಿಸ್ತೀಯಾ? ಮಂತ್ರಿಗಳು ಎಂದು ಬರ್ತಾರೇ! ಎಂದು. ಸರಿ ಉಳಿದವರು ಕೂಡ ಹೀಗೆ ತಗಲಿಕೊಳ್ಳುತ್ತಾರೆ ಏನ್ಮಾಡ್ಲಪ್ಪ! ಅಂತ ಕಾಳಿಂಗರಾಯನಿಗೆ ಭಯ ತುಂಬಿತು. ಮುಜರಾಯಿ ಸಚಿವರ ಮನೆ ಕಾಂಪೌಂಡು ಗೋಡೇಯನ್ನು ಕೂಡ

ಇವನು ಮುಟ್ಟುಕ್ಕೆ ಸಾಧ್ಯವಿರಲಿಲ್ಲ. ಆದರೂ ದೊಡ್ಡ ಹೆಸರು ಹೇಳಿ ಏನೋ ಬಾಳು ನಡೆಸಿಕೊಂಡಿದ್ದ. ರಾಮಮಂದಿರದ ಸೂರಯ್ಯನಿಗೆ ಮಾಸ್ತರ ಕಾಳಿಂಗ ರಾಯರ ಮೋಸ ತಿಳಿದರೆ ಇವರ ತಲೇನ ಹೊಡಿಸುವುದಕ್ಕೂ ಅವರು ಹೇಸುಲ್ಲ ಅಂತ ಆ ಹೊತ್ತಿಗೆ ಹಿಂದೀ ಮಾಸ್ತರರಿಗೆ ತಿಳಿದಿತ್ತು.

ಅನಾಥರಕ್ಷಕ! ಈ ಊರು ಬಿಟ್ಟು ಕಳ್ಳತನದಲ್ಲಿ ಓಡಿಹೋಗುವ ಹಾಗೆ ಆಯ್ತಲ್ಲಪ್ಪಾ ಎಂದು ತಿಳಿಕನ್ನಡದಲ್ಲಿ ಅತ್ತ. ಕನ್ನಡದ ದೇವರಿಗೆ ಕೇಳಿಸಿತು ಅಂತ ಕಾಣುತ್ತೆ.

ಮಾರನೆದಿನದ ಪತ್ರಿಕೆಗಳಲ್ಲಿ ಸುದ್ದಿ ಬಂದಿತ್ತು. ಮಾಮೂಲಿನಂತೆ ಸಚಿವ ಸಂಪುಟವು ರಾಜೀನಾಮೆ ಇತ್ತಿದೆ. ಬಹುಮತದ ವಿಶ್ವಾಸವಿರುವ ನಾಯಕರನ್ನು ಆರಿಸಲು ದಿಳ್ಳಿಯಿಂದ ನಕ್ಷತ್ರೀಕರು ಬರುತ್ತಾರೆ ಸದ್ಯದಲ್ಲೇ! ಅಂತ ದಪ್ಪಕ್ಷರಗಳ ಬಿರಿಬಿರಿಸುದ್ದಿ ಇತ್ತು. ಮುಳುಗುತ್ತಿದ್ದ ಕಾಳಿಂಗರಾಯರಿಗೆ ದೊಡ್ಡ ದೋಣಿ ಸಿಕ್ಕಿ ದಂತಾಯ್ತು.

"ಏನ್ಮಾಡಲೀ! ನಮ್ಮ ಸಚಿವಾಧ್ಯಕ್ಷರು ರಾಜೀನಾಮೆ ಕೊಟ್ಟುಬಿಟ್ಟರು ಇಲ್ಲದೇ ಇದ್ದರೆ, ನಾಳೆ ನಾಡಿದ್ದರಲ್ಲೇ ಹೋಗಿ ಕರೆದುಕೊಂಡು ಬಂದು ನಿಮಗೆಲ್ಲಾ ಅವರ ಕೈನಲ್ಲೇ ಶಾಲು ಹೊದಿಸ್ತಾ ಇದ್ದೆ" ಅಂತ ಜಂಭ ಕೊಚ್ಚುಕೊಳ್ಳುಕ್ಕೆ ಆರಂಭಿಸಿದರು.

"ಮುಂದೆಯಾರು ಬರ್ತಾರೋ ನೋಡೋಣ. ನನ್ನ ಹತ್ತಿರ ಹಿಂದಿ ಕಲಿತವರ್‍ಯಾರಾದರೂ ಸಚಿವರಾಗಿ ಬಂದರೆ. "ಗುರುದಕ್ಷಿಣೆ ಕೊಡೋಸಮಯ ಬಂದಿದೆ ಸಚಿವರೆ! ನಮ್ಮೂರಿಗೆ ಬಂದು ಜಯಗಳಿಸಿದ ನನ್ನ ಶಿಷ್ಯರಿಗೆ ಶಾಲು ಕೊಡದೆ ಇದ್ದರೆ ಪರವಾಗಿಲ್ಲ. ಸರಕಾರದ ಪರವಾಗಿ ಹಿಂದೀ ಸಂಘದ ಪರವಾಗಿ ಒಂದೊಂದು ಕಂಬಳೀನಾದರೂ ಹೊದಿಸಿ ಹೋಗಿ ಅಂತ ಹೇಳಿ ಎಳೆದುಕೊಂಡು ಬರ್ತೀನಿ" ಎಂದು ಹೇಳುತ್ತಾ ಮುಂದಿನ ವರ್ಷದ ಊಟವನ್ನು ಭದ್ರಮಾಡಿ ಕೊಂಡರು.

—ಹಿಂದೀ ಪಂಡಿತ

೨೪–೩೨ರ ಪ್ರಾಯ ಬರುವತನಕ ತಾರಾ ಲೋಕದಲ್ಲಿ ಯಾವ ಹೆಣ್ಣೂ ಮದುವೆಯಾಗುವುದಿಲ್ಲವಂತೆ.

—ಆದರೆ ಐದಾರು ವರ್ಷಗಳಲ್ಲೇ ಹತ್ತಾರು ಮದುವೆ ಮಾಡಿಕೊಂಡು ಕಳೆದುಹೋದ ಪ್ರಾಯವನ್ನು ಸರಿಪಡಿಸಿಕೊಳ್ಳುತ್ತಾಳಂತೆ.

* * * *

ಅಭ್ಯಾಸ ಬಲ

ಒಂದೂರಿನಲ್ಲಿ ಒಬ್ಬ ಹುಡುಗ ಇದ್ದನಂತೆ. "ಅಯ್ಯೋ! ಅದೇ ಊರಲ್ಲಿ ಇನ್ನೊಂದು ಹುಡುಗಿ ಇದ್ದಳು ತಾನೇ" ಅಂತ ಬೇಜಾರು ಪಟ್ಟುಕೋ ಬೇಡಿ. ಆ ಊರಿನಲ್ಲಿ ಒಬ್ಬ ಮುದಿ ಡಾಕ್ಟರಿದ್ದನಂತೆ ; ಗಂಡುಡಾಕ್ಟರು.

ಒಂದು ದಿನ ಹುಡುಗ ಬೈಸಿಕಲ್ ಸವಾರಿ ಮಾಡ್ತಾ ರಸ್ತೆಯಲ್ಲಿ ಹೋಗುತ್ತಿದ್ದನಂತೆ. ಸರಪಣಿ ಕಳಚಿ ಕೊಂಡಿತಂತೆ. ಹುಡುಗ ಇಳಿದು ಸರಪಣಿಯನ್ನು ಚಕ್ರದ ಹಲ್ಲುಗಳಿಗೆ ತೊಡಿಸಲು ಪ್ರಯತ್ನ ಮಾಡುತ್ತಿದ್ದನಂತೆ.

ಆಗ ಅದೇ ರಸ್ತೆಯಲ್ಲಿ ಮುದುಕ ಡಾಕ್ಟರು ಹೋಗುತ್ತಿದ್ದನಂತೆ. ಹುಡುಗನ ತಾಪತ್ರಯವನ್ನು ನೋಡಿ, ಅವನ ಸಹಾಯಕ್ಕೆ ಹೋದನಂತೆ. ಸರಪಣಿಯನ್ನು ಹಲ್ಲು ಚಕ್ರಕ್ಕೆ ತೊಡಿಸಿ ಹಿಂದಿನ ಗಾಲಿಯ "ಹಬ್ಬ್"ನ್ನು ಬಿಗಿಮಾಡಿ, ಈಗ ಸೈಕಲ್ ಸರಿಯಾಗಿದೆ. ಸವಾರಿಮಾಡು ಹೋಗು, ಇನ್ನೊಂದು ತಿಂಗಳಲ್ಲಿ ಒಮ್ಮೆ ಬಂದು ತೋರಿಸು. ಪ್ರಾಯಶಃ ಚೆನ್ನಾಗಿಯೇ ಇರುತ್ತೆ ಆದರೂ ಸರಿಯಾಗಿದೆಯೇ ಅಂತ ಪರೀಕ್ಷೆಮಾಡ್ತೀನಿ ಅಂತ ಹೇಳಿದನಂತೆ.

ಹುಡುಗ ಬೈಸಿಕಲ್ಲನ್ನೇರಿ ವಂದನಾರ್ಪಣೆ ಮಾಡಿ ಹೊರಟುಹೋದ. ಒಂದು ತಿಂಗಳಾಗುತ್ತಲೂ ಡಾಕ್ಟರ ಬಳಿಗೆ ಬೈಸಿಕಲ್ ತೆಗೆದುಕೊಂಡು ಹೋದ. ಅವರು ಪರೀಕ್ಷೆಮಾಡಿ ಹ್ಯಾಂಡಲನ್ನು ತಟ್ಟುತ್ತಾ "ಸರಿಯಾಗಿದೆ ಕಣಯ್ಯಾ. ರಿಪೇರಿ ಮಾಡಿದ್ದು ಸಾರ್ಥಕವಾಯ್ತು. ಇನ್ನೊಂದು ತಿಂಗಳು ಬಿಟ್ಟುಕೊಂಡು ಇನ್ನೊಂದು ಸರ್ತಿ ಪರೀಕ್ಷೆಗೆ ತೆಗೆದುಕೊಂಡು ಬಾ" ಎಂದು ಹೇಳಿದರು.

ತಿಂಗಳಿಗೊಮ್ಮೆ ಬೈಸಿಕಲ್ಲನ್ನು ಪರಿಕ್ಷಾರ್ಥವಾಗಿ ಮುದುಕ ಡಾಕ್ಟರ ಬಳಿಗೆ ಹುಡುಗ ತೆಗೆದುಕೊಂಡು ಹೋಗಲು ಪ್ರಾರಂಭಮಾಡಿದ. ಅದೇ ಅಭ್ಯಾಸ ಅವನನ್ನು ಜಪ್ಪಂತ ಹಿಡಿಯಿತು.

ಎಲ್ಲಿ ಯಾವಾಗ ಈ ಬೈಸಿಕಲ್ಲು ತೊಂದರೆ ಕೊಡುತ್ತೋ ಎನ್ನುವ ಭೀತಿ ಆ ಹುಡುಗನನ್ನು ಹಿಡಿದುಕೊಂಡಿತು. ಹೀಗಾಗಿ ಪರೀಕ್ಷೆ ಮಾಡಿಸುವಾಗ ಮಾತ್ರ ಆ ಬೈಸಿಕಲ್ಲನ್ನು ಮುದಿ ಡಾಕ್ಟರ ಬಳಿಗೆ ತೆಗೆದುಕೊಂಡು ಹೋಗಲು ಹೊರಕ್ಕೆ ತೆಗೆಯುತ್ತಿದ್ದ. ಕಡೆ ಕಡೆಗೆ ಬೇಜಾರಾಗಿ, ಬೈಸಿಕಲ್ಲಿನ ಸವಾರಿಯನ್ನೇ ಬಿಟ್ಟು ಬಿಟ್ಟ. ಯಾಕೆ ಹೇಳುಕ್ಕೆ ಬಂದೆ ಅಂದರೆ ಈ ಮುದಿ ಡಾಕ್ಟರುಗಳು ಹೆದರಿಕೆ

ಯಿಂದ ತಮಗೆ ಸಾಕಷ್ಟು ಬೇರೆ ಕೆಲಸವಿಲ್ಲದ್ದರಿಂದ, ತಿಂಗಳಿಗೊಮ್ಮೆ ಬಂದು ಪರೀಕ್ಷೆ ಮಾಡಿಸಿಕೋ ಎಲ್ಲವೂ ಚೆನ್ನಾಗಿದೆ. ತೃಪ್ತಿಕರವಾಗಿದೆ ಈಗ ಎಂದು ಧೈರ್ಯ ಹೇಳುವಾಗಲೇ ಮುಂದೆ ಅನಿರೀಕ್ಷಿತವಾಗಿ ತೊಂದರೆ ಉಂಟಾಗಬಹುದು ಎಂಬ ಭಯವನ್ನು ಅಂಕುರಿಸಿತ್ತಾರೇನೋ ಎಂದು ಅನ್ನಿಸಿತು; ನನ್ನ ವೈದ್ಯರು ಇದೇ ಸಲಹೆಯನ್ನು ಮೂವತ್ತನೆ ಬಾರಿ ಕೊಟ್ಟಾಗ.

—ಪ್ರಸಾದ್.

ಮರುತ್ತರ

ಆತ: ನಾನೂ ನೀನೂ ಜೋಡಿ
ಈ ಜೀವನ ಎತ್ತಿನ ಗಾಡಿ

ಆಕೆ: ಅಲ್ಲವೆಂದವರಾರು?....ಟ್ಯಾಕ್ಸಿ ತನ್ನಿ ಬೇಗ
ತೌರೂರಿಗೆ ತೆರಳಬೇಕು ಗೌರಿಹಬ್ಬ ಈಗ

ಆಕೆ: ಕೇಳಸಿತೆ ಅಡಿಗೆಮನೆಯಲ್ಲಿ ಇಲಿಗಳ ಗದ್ದಲ
ಎಳೆದು ಕೊಂಡರಲ್ಲ ರಗ್ಗು ಮಂಚದಿಂದ ಬೀಳಲ

ಆತ: ಥೂಹೋಗೇ ನಾನೋ ಬೊಮ್ಮನಹಳ್ಳಿ ಕಿಂದರಿಜೋಗಿ
ತಿನ್ನಲಿ ಬಿಡು ಮೂಗಿಲಿ ನೀಮಾಡಿದ ಹುಳಿಯ ನಾನೋ ಯೋಗಿ

—"ಅಷ್ಟಾವಕ್ರ"



"ನೋಡಿದ್ರೇನ್ರಿ ಕೇಂದ್ರ ಸರ್ಕಾರಕ್ಕೆ ಈಗೀಗ ಬುದ್ಧಿ ಬರ್ತಾ ಇದೆ. ನಮ್ಮ ಸ್ಟೇಟಿನಲ್ಲಿ ನಡೀತಿರೋ ಕಚ್ಚಾಟ ನೋಡಿ ಹೆಂಗಸನ್ನ ಗೌರ್ನರ್ ಮಾಡ್ತಾರಂತೆ."

ಘಾಟಿ ತಮ್ಮನ ಕಗ್ಗ

(ದೊಡ್ಮೀನು ಚಿಕ್ಮೀನಿಗೆ ಕೊಟ್ಟ ಉಪದೇಶ)

ಗಾಳಿಯನು ಗುದ್ದಿದರೆ ಮೈನೊಯ್ವುದೊಂದೆ ಫಲ
ಅರ್ಜಿ ಗಿರ್ಜಿಗಳೆಲ್ಲ ನೂರಿದ್ದರೇನು ?
ಮೇಳವಿಸೆ ಅರ್ಜೀಗೆ ಮಾಮೂಲ ಆಗ ಫಲ
ಅರಿತು ನಡೆಯಲಿ ಜನರು — ಘಾಟಿ ತಮ್ಮ

ಯಾರಿಗೂ ಕಾಣದೊಡೆ ಮಾಮೂಲ ಕೊಂಡರೇಂ
ಬಾಯ್ ಚಪಲ ಕೈಚಪಲ ನೀಡಿದುದ ಮೆಲ್ಲು
ಅನುಮಾನಕೆಡೆಯಿರದೆ ಯಾರೆಷ್ಟು ಮೆದ್ದರೇಂ ?
ಮಾಮೂಲು ಕೇಳಲ್ಲ ಘಾಟಿ ತಮ್ಮ

ಎರಡು ಕೋಣೆಗಳ ಮಾಡು ನೀಂ ಆಫೀಸನಲಿ
ಒಂದರಲಿ ಫೈಲುಗಳನೆತ್ತಿ ಮುಗುಚಾಡು
ವಿರಮಿಸುತ ಕೈನೀಡು ಮತ್ತೆ ಒಳಕೋಣೆಯಲಿ
ಮಾಮೂಲ ಮಾರ್ಗವಿದು ಘಾಟಿ ತಮ್ಮ.

ಬೇಕು ಬೇಕದು ಬೇಕು ಬೇಕಿದೆನಗಿನ್ನೊಂದು
ಬೇಕೆನುತ ಬೊಬ್ಬಿರಿವರೆಲ್ಲ ಮನೆಯವರು
ಬೇಕಂತಲೇ ರಚಿಸಿ ಬೊಮ್ಮನೀ ಬೇಕು ಜಪ
ಮಾಮೂಲ ಸೃಷ್ಟಿಸಿದ ಘಾಟಿ ತಮ್ಮ

ಮಾಮೂಲು ಕೊಳುವಂದು ಕೇಳು ಅದನೀವ ಕೈ
ಮುಗ್ಧ ಮತಿಗಳದೋ ಆ್ಯಂಟಿಕರಪ್ಷನಿದೋ
ಮಾಮೂಲಿ ಜನಗಳದ ತಿನ್ನು ನೀಂ ಹೆದರದಲೆ
ಮಿಕ್ಕದ್ದು ಮುಟ್ಟದಿರು ಘಾಟಿ ತಮ್ಮ

ಹರಿಶ್ಚಂದ್ರನೆ ನೀನು ಶಿಬಿಯೆ ಕರ್ಣನೆ ನೀನು
ಮಾಮೂಲು ಕೆಡುಕೆಂದು ನಿಟ್ಟುಸಿರು ಬಿಡಲು
ನಿಷ್ಠುರದ ಸೀಟಿದುವು ನಿಷ್ಠೆ ನೀತಿಯು ಸಲ್ಲ
ಎಷ್ಟಾಯ್ತೊ ಅಷ್ಟು ಹೊಡಿ ಘೂಟಿ ತಮ್ಮ

ಬರಿಯ ಕಿರುಪಳಿ ನೀನು ಈ ಮಹಾಯಂತ್ರದಲಿ
ನೇರವಾಗಿದ್ದರೇನು ಎಡಗೈನೀಡಲೇನು
ತೊರೆದೆಲ್ಲ ದಾಕ್ಷಿಣ್ಯ ಎಲ್ಲರಂತಾಗುತಲಿ
ಗಾಳಿ ಬಂದಾಗ ತೂರಯ್ಯ ಘೂಟಿ ತಮ್ಮ

ಕೆಲಸದಾತುರಕಿಂತ ರೆಸ್ಟಿನಾತುರ ತೀಕ್ಷ್ಣ
ರೆಸ್ಟಿನಾತುರಕಿಂತ ನಾಷ್ಟದೊಲವು
ಮಾಮೂಲ ದಾಹ ಈ ಎಲ್ಲಕುಂ ತೀಕ್ಷ್ಣತಮ
ನಡೆಸುವುದದೆಲ್ಲವನು ಘೂಟಿ ತಮ್ಮ

ಮುಕ್ತಿಪಥ ಭುಕ್ತಿಪಥ ಬೇರೆಬೇರೆಯವಲ್ತೆ
ಅಂತೆಯೇ ಸಂಬಳದ ಗಿಂಬಳದ ಪಥಗಳ್
ಪರ್ಸು ಭರ್ತಿಯೆ ನಿನ್ನ ಆದರ್ಶವಾಗಿರಲು
ಕಣ್ಮುಚ್ಚಿ ಕೈ ನೀಡು ಘೂಟಿ ತಮ್ಮ

ಹಸಿರು ನೋಟನು ಮೆತ್ಗೆ ಕಿಸೆ ಬಳಿಯಬಿಡುವನಗೆ
ಪುಡಿಕಾಸು ಹೊಡೆವವರ ಕಂಡು ಕರುಬಿಲ್ಲ
ನೀಗು ನಿನ್ನಯ ಹಸಿವ ದಕ್ಕಿದುದ ನುಂಗುತ್ತ
ನಾನಡ್ಡ ಬಾರೆನೆಲೊ ಘೂಟಿ ತಮ್ಮ

(ಮಂಕು ತಿಮ್ಮನಿಗೆ ನಮಿಸಿ)

—ರಾಮಿ

ಮುಳ್ಳೂರಿನ ಕುಪ್ರಸಿದ್ಧರು

ಮುಳ್ಳೂರಿನ ಪಟೇಲ್ ಮುಳ್ಳೂರಯ್ಯ ಮುಂಬಯಿಗೆ ಬಂದಿದ್ದು, ಜುಹು ಬೀಚಿನಲ್ಲಿ ಮಡಿ ಹೆಂಗಸರ ಜೊತೆ, ಒಂಟಿ ಸಲಗನಂತೆ, ಎದೆ ಸೆಟೆಸಿ ಸುತ್ತಾಡ್ತಿದ್ದುದು, ಅಚ್ಚರಿಯೇನು, ಧಿಗ್ಭ್ರಮೆ ಹಿಡಿಸುವ ದೃಶ್ಯವೆ? ಎಲಾ ಇದೇನು ಭ್ರಾಂತಿಯೇ ಯಾ ದೃಷ್ಟಿಮಾಂದ್ಯವೇ ತೋಚದೆ ಒದ್ದಾಡಿದೆ.

ಅಚ್ಚ ಕೆಂಪು ಸೀರೆಯಲ್ಲಿ ನೀಟು ಕಚ್ಚೆ ಹಾಕಿಕೊಂಡು, ಬಗಲಲ್ಲಿ ಮಡಿ ಪೆಟ್ಟಿಗೆ ಇರುಕಿಕೊಂಡು, ಹತ್ತು ಮಂದಿ ಮಡಿ ಹೆಂಗಸರು ಹಿಂದೆ, ಹರ್ಸ ಸರಿಗೆ ರುಮಾಲಿಟ್ಟುಕೊಂಡು, ಪಂಚೆ ಕಚ್ಚೆಯ, ಉಲ್ಲನ್ ಕೋಟು ಧಾರಿ ಮುಳ್ಳೂರಯ್ಯ ಮುಂದೆ, ಬೀಚಿನಲ್ಲಿ ಠಲಾಯಿಸುತ್ತಿದ್ದರು.

ಖಂಡಿತ ಅವ ಮುಳ್ಳೂರಯ್ಯನೆ. ಅವನ ತುಂಟು ಕಾಲು, ವಾಲುವ ಕತ್ತು ಗಿರಿಜಾ ಮೂಗು, ನೋಡಿಯೇ ನನಗೆ ಮನದಟ್ಟಾಯಿತು. ಆದರೆ ಇವ ಯಾಕೆ ಇಲ್ಲಿ? ಅದೂ ಈ ಮಡಿ ಹೆಂಗಸರ ಕೂಟ ಇವನಿಗೇನು ಕೆಲಸ?

ಜುಹು ಬೀಚಿಗೆ ಜನ ಬರ್ತಿದ್ರು. ದಿಟ. ಬಳಕುವ ಸೊಟಗಳನ್ನು ಹಿಡಿದು, ಓಡಿಯಾಡುವ, ಪಟಾಪಟಿ ಬುಷ್‌ಕೋಟ್ ಧಾರಿಗಳು, ಗುಜರಾತಿ ಗಜಗಮನೆಯರ ಹಿಂದೆ ಆಮೆಗಾಲಿಡುತ್ತಿದ್ದ ಕೂಷ್ಮಾಂಡ ಉದರದ ಸೇಟಜಿಗಳು. ಇದು ಮಾಮೂಲಿ. ಅದು ಬಿಟ್ಟು ಇದೇನು ಈ ಮುಳ್ಳೂರಯ್ಯನ ವಿಪರೀತ ಚೇಷ್ಟೆ? ಮಡಿ ಹೆಂಗಸರನ್ನ ಕಟ್ಟಿಕೊಂಡು ಇವ ಬೀಚಿಗೆ ಬರೋದರ ಮರ್ಮವೇನು? ಇವನಿಗೇನು ಪಿತ್ತವಿಕಾರವೇ, ಉಷ್ಣಮಾಂದ್ಯವೇ? ಅರ್ಥವಾಗದೆ ಒದ್ದಾಡಿದೆ ನಾನು.

ಮುಳ್ಳೂರಯ್ಯನ್ನ ಒಂದು ಹದ ಮಾತಾಡಿಸೋಣವೆನ್ನಿಸಿ, ನಾನು ಅವನೆಡೆಗೆ ನಡೆದೆ. ಅಷ್ಟರಲ್ಲೇ ಅವನಿಗೆ ಬೂಟ್‌ಪಾಲೀಷ್ ಬಚ್ಚಾಗಳು, ತೇಲ್ ಮಾಲೀಷ್‌ಗಾರರು, ಗುಗ್ಗೆ ತೆಗೆಯುವ ನಿಪುಣರು ಗಂಟುಬಿದ್ದಿದ್ದರು. ನನ್ನ ನೋಡುತ್ಲೂ ಮುಳ್ಳೂರಯ್ಯ ಅವರನ್ನೆಲ್ಲಾ ಒದರಿ ಹಾಕಿ, ನನ್ನೆಡೆಗೆ ನುಗ್ಗಿದ.

"ಅಲಲೇ ಇದೇನು ಸ್ವಾಮಿ ಇಲ್ಲಿ." ಅಂತ ಅವನ ಮಂಗ ಮುಷ್ಟಿಯಲ್ಲಿ ನನ್ನ ಕೈಯನ್ನು ಹಿಡಿದು ಕುಲುಕಿದ.

"ಅದೇನು ಮುಳ್ಳೂರಯ್ಯನೋರೆ ನೀವಿಲ್ಲಿ?" ಅಂತ ನಾನು ಮುಪ್ಪ ಪ್ರಶ್ನಿಸಿದೆ.

"ಯಾಕೆ ಬರಬ್ಯಾಡದಾ?" ಅಂತ ಹಳದಿ ಹಲ್ಲಿನ ಪೀತ ನಗೆಯನ್ನು ತುಳುಕಿಸಿದ.

"ಇಲ್ಲ....ಅದಕ್ಕಲ್ಲಾ...." ಅಂತ ನಾನು ಸುತ್ತಲು ಗುಂಪು ಕಟ್ಟಿದ್ದ ಮಡಿ ಹೆಂಗಸರ ಚಕ್ರವ್ಯೂಹದೆಡೆಗೆ ನೋಡಿದೆ. "ಓ ಇವರ ಜತೇಲಿ ಇನ್ನ ಅಂತ್ಲಾ ಏನೋರೆ. ಅದೆಲ್ಲಾ ದೊಡ್ಡ ಗುಟ್ಟು ಕಣ್ಸಾಮಿ" ಅಂತ ಹೇಳಿ, ನನ್ನ ಕಡೆಗೆ ಕಣ್ಣುಮಿಟುಕಿಸಿ, ತಲೆವಾಲಿಸುತ್ತಾ, ಕಾಲನ್ನು ಎಳೆದು ಹಾಕಿಕೊಂಡು, ಮುಳ್ಳೂರಯ್ಯ ಹೊರಟೇಹೋದ. ಮಡಿ ವಸ್ತ್ರಗಳು ಅವನನ್ನು ಹಿಂಬಾಲಿಸಿದವು.

ಮುಳ್ಳೂರಯ್ಯನ ರಹಸ್ಯ ನನಗೆ ತಿಳಿಯಲೇ ಇಲ್ಲ. "ಮಡಿ ಹೆಂಗಸರ ಕೂಟಿ ಇವನ ಲಲ್ಲೆ ಬಾಂಧವ್ಯ ಯಾಕೆ?" ಅಂಬೋದನ್ನ ತರ್ಕಿಸಲಾರದೆ ತೊಳಲಿದೆ.

* * * *

ಪಸಂದಾಗಿ ಚುರ್‌ಮುರಿ ತೊಗೊಂಡು ಒಂದೊಂದೆ ಕಾಳನ್ನು ನುಂಗುತ್ತಾ, ಮಾಹೀಮ ಬೀಚಿನಲ್ಲಿ ಕಾಲುಚಾಚಿ ಕೂತಿದ್ದೆ, ಒಂದು ದಿನ. ಚುರ್‌ಮುರಿ ಪೊಟ್ಟಣ ಕೈಯಲ್ಲಿದ್ದಹಾಗೆ ಕೊಂಚ ಜೋಂಪು ಹತ್ತಿ ಕಣ್ಣನ್ನು ಮುಚ್ಚಿದ್ದೆ. ಇದ್ದಕ್ಕಿದ್ದ ಹಾಗೆ ಏನೋ ಎಳೆದಂತಾಗೆ ಗಾಭರಿಯಿಂದ ಕಣ್ಣು ಬಿಟ್ಟೆ. ಪಕ್ಕೆಲಬು ಗಳು ತೊಡೆಯ ಎಮುಕೆಗಳು, ಕಾಣುತ್ತಿದ್ದ ಕುನ್ನಿಯೊಂದು, ಕಾಲು ಪೊಟ್ಟ ಚುರುಮುರಿಯೊಂದಿಗೆ ಕಾಗದವನ್ನು ನುಂಗಿ, ನನ್ನ ಕೈಯನ್ನು ನೆಕ್ಕುತ್ತಿತ್ತು. ಕತ್ತಿಗೆ ಟ್ವೈನ್ ದಾರ ಕಟ್ಟಿಸಿಕೊಂಡಿದ್ದ ಆ ಕುತ್ತವನ್ನು ನೋಡಿದಾಗ, ಅದರ ಆ ದಾಕ್ಷೀಣ್ಯದ ನಡತೆ ಹಾಗೂ ತುಂಟನಗೆಯನ್ನು ನೋಡಿದಾಗ, ನನಗೆ ಅದನ್ನ ಎಲ್ಲಿಯೋ ನೋಡಿದ ಹಾಗೆ ನೆನಪಾಯಿತು. ಎಲ್ಲಿ ಅಂಬೋದು ತಿಳಿಯದೆ ತಡಕಾಡುತ್ತಿದ್ದೆ. ಅಷ್ಟರಲ್ಲೇ ಕಾಲಿಗೆ ಕಾಲುಮಣದ ಪಾಪಾಸ್ ತಲೆಗೆ ½ ಪೌಂಡಿನ ಹೆಲ್‌ಮೆಟ್ ಹಾಕಿಕೊಂಡ, ಉಣ್ಣೆಯ ಮುವತ್ತೆಂಟು ಥರಹೇವಾರಿ ಸರಟಿನ ಮೇಲೆ, ಹುಲೀ ಚರ್ಮದ ವೇಸ್ಟನ್ನು ತೊಟ್ಟ, ನಡುವಿಗೆ ಬುಲೆಟ್ ಬೆಲ್ಟ್ ಬಿಗಿದ, ವಾಟರ್ ಬಾಟಲ್, ಕ್ಯಾಮರಾ, ಒಂದೊಂದು ಬಗಲಿಗೆ ತೂಗಿಸಿಕೊಂಡ ವ್ಯಕ್ತಿಯೊಂದು, ಕೋವಿಯನ್ನು ಹಿಡಿದುಕೊಂಡು ಓಡಿ ಬರುತ್ತಿತ್ತು. ನನಗೆ ಥಟ್ಟನೆ ಜ್ಞಾಪಕಕ್ಕೆ ಬಂತು. ಆ ವ್ಯಕ್ತಿ ಮುಳ್ಳೂರಿನ ಏಸ್ ಶಿಕಾರಿ ಎಂಕ್ಟಪ್ಪ. ಇದು ಅವನ ಬೇಟೆಯ ಕುನ್ನಿ ಅಂತ.

ಶಿಕಾರಿ ಎಂಕ್ಟಪ್ಪ ಏದುಸಿರು ಮೇಲುಸಿರು ಬಿಟ್ಟುಕೊಂಡು ನನ್ನ ಮುಂದೆ ಕುಸಿದ. ಕೋವಿಯನ್ನು ಮರಳಿನ ಮೇಲೆ ಕುಕ್ಕಿ, ಕುನ್ನಿಗೆ ಕಟ್ಟಿದ್ದ ಟ್ವೈನ್ ದಾರವನ್ನು ಕೈಯಿಗೆ ತೆಗೆದುಕೊಂಡ. ಅಷ್ಟರಲ್ಲೇ ಹತ್ತು ಜನ ಮಡಿ ಹೆಂಗಸರು ಅಲ್ಲಿಗೆ ಬಂದು ನೆರೆದರು.

ಕೊತಲ್ಲಿಂದ್ಲೆ ಎಂಕ್ಟಪ್ಪ ನನಗೊಂದು ಮಿಲ್ಟ್ರಿ ಸೆಲ್ಯೂಟ್ ಹೊಡೆದು "ಬೊಂಬಾಯ್ನಲ್ಲಾ ಬುದ್ದಿ ನೀವೀಗ ಇರೋದು?" ಅಂತ ನನ್ನ ಯೋಗಕ್ಷೇಮ ವಿಚಾರಿಸಿದ. ನಾನು ನನ್ನ, ಮದುವೆಯಾಗಿ, ಮಾವನ ಮನೆ ಸೇರಿದ ಕಥೆಯೆಲ್ಲಾ ಹೇಳಿ ನಂತರ ಕೇಳಿದೆ.

"ಇದೇನು ವೆಂಕ್ಟಪ್ಪನೋರೆ ಈ ಊರಿಗೆ ದಯಮಾಡಿಸಿದ್ರಿ?" ಅಂತ. ಇವನೂ ಮುಳ್ಳೂರಯ್ಯನ ಹಾಗೆ, ಮಡಿ ಹೆಂಗಸರನ್ನ ಕಟ್ಕೊಂಡು ಬಂದಿದ್ದನ್ನು ನೋಡಿ ನನಗೆ ಆಶ್ಚರಿಯಾಯ್ತು.

"ಸುಮ್ಕೆ ಬಂದೆ ಶಿಕಾರಿ ಆಡಿ ಆಡಿ ನಂಗೂ ಬ್ಯಾಸರ ಬಂದೋಗಯ್ತೆ. ಒಂದೆರ್ಡು ದಿನ ಸುಮ್ಕೆ ಷಹರ್ನ ನೋಡ್ಕೊಂಡು ಓಗೋಣ ಅಂತ ಬಂದಿವ್ನಿ...." ಅಂತ.

"ಅದ್ಸರಿ ಇದೇನು ಇವರುಗಳ್ನೆಲ್ಲಾ ಕರ್ಕೊಂಬಂದಿದೀರಿ ಇವರೆಲ್ಲಾ ನಿಮಗೆ ಹ್ಯಾಗೆ ಸಂಭಂದ?" ಎಂದೆ

ಹಾಗೆ ಕೇಳಿದ್ದೆ ತಡ, ಕೆಳಗೆ ಮಡಿಗಿದ್ದ ಕೋವಿಯನ್ನು ಹೆಗಲಿಗೇರಿಸಿ, ಕುನ್ನಿಯನ್ನೆಳೆದುಕೊಂಡು, ಮಡಿ ಹೆಂಗಸರ್ನ ಕರ್ಕೊಂಡು ಹೊರಟೇ ಹೋದ ಎಂಕ್ಟಪ್ಪ.

ನನಗೆ ಮಂಕು ಹಿಡಿದ ಹಾಗಾಯ್ತು. ಒಂದೂ ಅರ್ಥವಾಗಲಿಲ್ಲ. ಏನಿವರ ಆಟ. ಮಡಿ ಹೆಂಗಸರ್ನ ಕರ್ಕೊಂಡು ಜುಹು ಬೀಚಿನಲ್ಲಿ, ಮತ್ತಿತರ ಬೀಚುಗಳಲ್ಲಿ ತಿರುಗುವ ಉದ್ದಿಶ್ಯವೇನು? ಮುಳ್ಳೂರಯ್ಯನಿಗೂ, ಎಂಕ್ಟಪ್ಪನಿಗೂ ಪೈತ್ಯವೇ? ಮುಸಲಾ ಅವರಿಗೆ ಮರಳಾದರೂ ಅವರ ಕೂಡೆ ಓಡಿಯಾಡುವ ಈ ಮಡಿ ಹೆಂಗಸರಿಗಾದ್ರು ಬುದ್ದಿ ಬ್ಯಾಡ್ವೆ? ನನಗ್ಯಾಕೋ ಬುದ್ದಿಯೇ ತೋಚದ ಹಾಗಾಯ್ತು.

*   *   *   *

ರವಿವಾರ ಕಛೇರಿಗೆ ರಜವಿತ್ತು. ಮುಖಕ್ಕೆ ಸೋಪು ಹಚ್ಚುತ್ತಿದ್ದೆ. ತಾರ, ನನ್ನ ಮಡದಿ, ಆದಿನದ ಪೇಪರನ್ನು ತಂದು ನನ್ನ ಮುಖಕ್ಕೆ ರಾಚಿ, "ನೋಡಿ ನಿಮ್ಮೂರಿನವರ ಯೋಗ್ಯತೇನ" ಅಂದಳು.

"ಯಾಕೇ, ಪೇಪರಿನಲ್ಲಿ ಬರೋ ಅಂಥಹುದನ್ನು ನಮ್ಮ ಮುಳ್ಳೂರಿನವರು ಯಾವತ್ತು ಮಾಡಿದಾರೆ. ಮುಳ್ಳೂರಿನಲ್ಲಿ ಅಂಥಹ ದೊಡ್ಡವ್ಯಕ್ತಿಯಾರು?" ತಿಳಿಯದೆ ಕೇಳಿದೆ. "ಏನೆ ಮುಳ್ಳೂರಯ್ಯ ಅಥವಾ ಬೇರೆ ಯಾರಾದ್ರು ಮಂತ್ರಿಗಳಾದರೇನೆ?" ಅಂತ


"ಮಂತ್ರಿಗಳಲ್ಲ, ಲಾಕ್ ಅಪ್‌ಗೆ ಹೋದ್ರು" ಅಂದಳು ತಾರ, ಕ್ರೂರವಾಗಿ.

"ಎಲಾ, ಇವಳ! ಇದೇನು ಹೇಳ್ತಾಳೆ ಇವಳು" ಅಂತ ಪೇಪರನ್ನ ಅವಳ ಕೈಯಿಂದ ಕಿತ್ಕೊಂಡು ಓದಿದೆ. ದಿಟ ಅವಳು ಹೇಳಿದ್ದು. ಮುಳ್ಳೂರಿನ ಪಟೇಲ್

ಮುಳ್ಳೂರಯ್ಯ ಮತ್ತು ಏಸ್ ಶಿಕಾರಿ ಎಂಕ್ಟಪ್ಪ, ಇಬ್ಬರಿಗೂ ಮೂರು ವರ್ಷ ಕಠಿಣ ಸಜ ವಿಧಿಸಿದ್ದರು. ಕೇಸಿನಲ್ಲಿ ಸಿಕ್ಕಿಕೊಂಡಿದ್ದ ಇಪ್ಪತ್ತು ಜನ ಮಡಿ ಹೆಂಗಸರನ್ನು, ಒಳ್ಳೆಯ ನಡತೆಯ ಮುಚ್ಚಳಿಕೆಯ ಮೇಲೆ ಖುಲಾಸೆ ಮಾಡಿದ್ದರು. ಮಡಿ ಹೆಂಗಸರ ಶಾಮೀಲಾಗಿ, ಎಂಕ್ಟಪ್ಪ, ಮುಳ್ಳೂರಯ್ಯ ಕಳ್ಳತನದಲ್ಲಿ ವಿಸ್ಕಿ ಬ್ರಾಂದಿಗಳನ್ನು ಮಾಡಿ ಪೆಟ್ಟಿಗೆಗಳಲ್ಲಿಟ್ಟುಕೊಂಡು ಮುಂಬಯಿಗೆ ಸಾಗಿಸುತ್ತಿದ್ದರಂತೆ.

" ನೋಡಿ ನಿಮ್ಮ ಮುಳ್ಳೂರಿನೋರ ಪ್ರತಾಪಾನ ಏನೋ ಕೊಚ್ಕೋತಿದ್ರಲ್ಲಾ" ಅಂತ ತಾರ ಅಂದಾಗ ನಾನು ಬಿಟ್ಟಿದ್ದ ಮೀಶೆಯನ್ನು ಯಾವುದೋ ಜ್ಞಾನದಲ್ಲಿ ಬೋಳಿಸಿದ್ದೆ.

—ಕೆ. ಎಸ್. ಕಿಟ್ಟಿನ್



" ಏನೋ " ಸ್ಟ್ರೈಕ್‌ಗೆ ಸೇರಲ್ವೇನೋ, ಮನೆ ಬಿಟ್ಟು ಓಡಿಸ್‌ಬಿಡ್ತೇನಿ,
ಸೇರ್ಡ್ಹೋದ್ರೆ ಎಲ್ಲಂದ ತರ್ಲೋ ಜಾಸ್ತಿ ಫೀಜನ ನಾನು"

ಎಲ್ಲಾ ಒಳ್ಳೆಯದಕ್ಕೇ!

ನಾನೂ ಶೌರಿ, ರೇಸಿಂಗ್ ಸೀಸನ್‌ಗಾಗಿ ಬೆಂಗಳೂರಲ್ಲಿದ್ದೆವು. ಅಂದು ಶನಿವಾರ, ತುಫಾನ್-ಕಿ-ಭೇಟಿ ಗೋಂಡಾಲ್ ಕಪ್ ಗೆಲ್ಲುತ್ತಾಳೆ ಅಂತ ನಂಬಿ, ಮೋಸಹೋಗಿದ್ದೆ. ಹೆಬ್ಬೂರಿನ ಅಗಸ ಮುನೀರನ ಕತ್ತೆ ಓಡಿದ್ದರೆ, ಗೊಂಡಾಲ್ ಕಪ್ ಗೆಲ್ಲಬಹುದಿತ್ತು! ತುಫಾನ್-ಕಿ-ಭೇಟಿ ಮಾತ್ರ, ವಿಜಯ ಸ್ಥಂಬ ಇನ್ನೇನು ಕೇವಲ ಕ್ರಿಕೆಟ್ ಪಿಚ್ಚಿನಿಂದ ಬೌಂಡರಿಯಷ್ಟು ದೂರವಿದೆ ಅನ್ನುವಾಗ, ನಿಜವಾಗಿ ತುಫಾನ್‌ನಲ್ಲಿ ಸಿಕ್ಕಿಕೊಂಡವಳ ಹಾಗೆ, ಎರಡು ಕಾಲುಗಳ ಮೇಲೆ ನಿಂತು, ಕೇಕೆ ಹಾಕಿ, ಜಾಕಿ ತಕ್ಲಿಫನ ಕೆಡವಿ ಬೇಲಿ ಹಾರಿ ಹುಲ್ಲು ಮೇಯುತ್ತ ನಿಂತಳು. ನಾನು ಬೇಜಾರಿನಿಂದ ನನ್ನ ಓಪೆಲ್ಲನ್ನೂ ಕಬ್ಬನ್‌ಪಾರ್ಕ್ ಕಡೆ ತಿರುಗಿಸಿದೆ. ಯಾರೂ ಇಲ್ಲದ ಜಾಗ ಹುಡುಕಿ, ಕಾರು ನಿಲ್ಲಿಸಿ, ಅಂದು ಕೊಂಡಿದ್ದ ಟಿಕೆಟ್ಟುಗಳನ್ನು ಲೆಕ್ಕ ಮಾಡಿ ಜಾತಾ ಬಾಕಿ ಶಿಲ್ಕು ತೆಗೆಯಲು ಹವಣಿಸಿಕೊಂಡು, ಶೌರಿಯನ್ನು ಕಾಫಿ ತರಲು ಫ್ಲಾಸ್ಕು ಕೊಟ್ಟು ಕಳುಹಿಸಿದೆ.

ಟಿಕೆಟ್ಟುಗಳನ್ನೆಲ್ಲಾ ಎಣಿಸಿ ಜಾತಾ ಬಾಕಿ, ರೂ 175-50 ನಷ್ಟ ತೆಗೆಯುವ ಹೊತ್ತಿಗೆ, ಶೌರಿ ಕಾಫಿ ತಂದ. ಇಬ್ಬರೂ ಕುಡಿದೆವು. ಫ್ಲಾಸ್ಕಿನ ಮುಚ್ಚಳ ಮುಚ್ಚುವ ಹೊತ್ತಿಗೆ ರೇಸಿನ ವಿಷಯ ಬದಿಗೊತ್ತಿದೆ. ಆಗಲೇ ನನಗೆ ಸುಮಾರು ಸೋಫಾ ಸೀಟಿಂದ ಸಿನಿಮಾ ಸ್ಕ್ರೀನ್ ಇರುವಷ್ಟು ದೂರದಲ್ಲಿ ಒಬ್ಬ ಬೆಳೆದ ಹುಡುಗಿ ಒಂದು ಚಿಕ್ಕ ಹುಡುಗಿಯನ್ನು ನಡೆಸಿಕೊಂಡು ನಮ್ಮ ಕಡೆ ಬರುತ್ತಿದ್ದುದು, ಕಣ್ಣಿಗೆ ಬಿದ್ದುದು. ಶೌರಿ ನನ್ನ ಕಣ್ಣುಗಳ ಕಡೆ ನೋಡುತ್ತಿದ್ದ.

" ಶೌರಿ, ನೋಡು-ಈ ಕಡೆ ಬರ್ತಿರೋ ಹುಡುಗಿ ನಮ್ಮ ಡಾಕ್ಟರು ಬಾಳಾಜೀ ರಾಯರ ಮಗಳಿದ್ದ ಹಾಗೇ ಇದ್ದಾಳೆ! ಇಷ್ಟು ಹೋಲಿಕೆ ಇರೋದು ಆಶ್ಚರ್ಯ ಈ ಹೋಲಿಕೆಗಳಿಗೆ ಕಾರಣವೇನಿರಬಹುದು ಶೌರಿ ?" ಅಂತ ಕೇಳಿದೆ.

" ಈಗ ಸಧ್ಯದಲ್ಲಿ ಹೋಲಿಕೆಗೆ ಕಾರಣ ಆ ಹುಡುಗಿ ಡಾಕ್ಟರ್ ಬಾಳಾಜಿ ರಾಯರ ಮಗಳೇ ಆದ್ದರಿಂದ ಸರ್."

ಡಾ|| ಬಾಳಾಜೀ ಮಗಳು ಸುಶೀಲಾ ಮತ್ತು ಅವಳ ಪುಟ್ಟ ಸ್ನೇಹಿತ ನಾವಿದ್ದಲ್ಲಿಗೇ ಬಂದರು.

" ಓಹೋ ಪಾಂಡು! ಜ್ಞಾಪಕವಿದೆಯೇ?" ಅಂದಳು ಸುಶೀಲಾ.

"ಬಾ ಸುಶೀಲಾ ಎಲ್ಲಿಗೆ ಬಂದಿದ್ದಿ? ಮೈಸೂರಿಂದ ಯಾವಾಗ ಬಂದಿ? ಈ ಕೂಸು ಯಾರು?"

ಶೌರಿ, ಓಪೆಲ್ಲಿನ ಬಾನೆಟ್ ಎತ್ತಿ ಏನೋ ನೋಡುತ್ತಿದ್ದ.

"ನಾನು ನಿನ್ನೆ ಬಂದೆ. ಇದು ನನ್ನ ತಂಗಿ ಸುಧಾ. ಈ ಊರಲ್ಲೇ ಬೋರ್ಡಿಂಗ್‌ನಲ್ಲಿದ್ದಾಳೆ. ನಮಸ್ತೆ ಮಾಡೇ ಸುಧಾ...."

"ನಮಸ್ತೆ" ಅಂದಳು ಸುಧಾ.

"ನಮಸ್ತೆ" ಅನ್ನುತ್ತಾ ಸುಧಾಳ ಕೆನ್ನೆ ಚಿವುಟಿದೆ.

ಸುಧಾ, ಸುಮಾರು 6-7 ವರ್ಷಗಳ ಗಂಡು ಹೆಣ್ಣು ಫಿಲಿಫ್ಸ್ ರೇಡಿಯೋ ಜಾಹಿರಾತಿನ ಬಾಲೆಯ ತರಹ ಪೋಷಾಕು ಧರಿಸಿ, ಮುಂದೆ ಮೇಡಮ್ ಆಗುವ ಲಕ್ಷಣ ತೋರುತ್ತಿದ್ದ ಹುಡುಗಿ.

"ಪಾಂಡು ಇಂದು ರಾತ್ರಿ ಮೈಸೂರು ರೈಲು ಹತ್ತಿಸಲು ಸಾಧ್ಯವೆ? ನಾನು ಇವತ್ತೇ ಹೊರಡಬೇಕು" ಅಂದಳು ಸುಶೀ.

"ಓಹೋ ಧಾರಾಳವಾಗಿ" ಅಂದೆ.

ಶೌರಿ ಕೆಮ್ಮಿದ.

"ನೀನೆಲ್ಲಿಳಿದು ಕೊಂಡಿದ್ದಿ ಪಾಂಡು?" ಅಂತ ವಿಚಾರಿಸಿದಳು.

"ಹೈಲ್ಯಾಂಡ್ ಹೋಟೇಲಿನಲ್ಲಿ"

"ಹಾಗಾದರೆ ಪಾಂಡು ನಿನಗೆ ತೊಂದರೆ ಇಲ್ಲದಿದ್ದರೆ ನಾನೂ ಸುಧಾ ಅಲ್ಲಿಗೇ ರಾತ್ರಿ ಊಟಕ್ಕೆ ಬರ್ತೀವೆ. ಅಲ್ಲಿಂದ ನನ್ನನ್ನ ಸ್ಟೇಷನ್ನಿಗೆ ಬಿಟ್ಟರೆ ಸಾಕು."

"ಧಾರಾಳವಾಗಿ. ತೊಂದರೆ ಏನಿಲ್ಲ ಶೌರಿ ರಾತ್ರಿ ಎರಡು ಹೆಚ್ಚಿನ ಊಟಕ್ಕೆ ಹೇಳಿಬಿಡು" ಅಂದೆ

"ಸರಿ ಸರ್" ಅಂದ.

ಸರಿ ಸರ್ ಅಂತ ಶೌರಿ ಹೇಳಿದರೂ, ಏನೇನೂ ಸರಿಯಲ್ಲ ಸರ್ ಅನ್ನುವ ಧ್ವನಿಯಲ್ಲೇ ಹೇಳಿದ ಹಾಗಿತ್ತು!

ಊಟ ಮುಗಿಸಿ, ರೈಲ್ವೆ ಸ್ಟೇಷನ್ನಿಗೆ ಹೊರಡುವ ಸಿದ್ಧತೆಯಾಯ್ತು.

"ಪಾಂಡು ನಿನ್ನಿಂದ ಇನ್ನೊಂದುಪಕಾರವಾಗಬೇಕು? ಸಂಕೋಚದಿಂದ ಹೇಳಿದಳು.

"ಏನದು?"

"ಸುಧಾನ ರಾತ್ರಿಯೇ ಕರ್ಕೊಂಡು ಹೋಗಿ ಲೋಕಾಂಬಾ ಬೋರ್ಡಿಂಗ್ ಹೋಮ್ ಸ್ಕೂಲಿನಲ್ಲಿ ಬಿಡಬೇಕು."

"ಅಷ್ಟೇತಾನೆ? ರಾತ್ರಿ ಸ್ಟೇಷನ್ನಿಂದ ಹಾಗೇ ಕಾರಲ್ಲಿ ಕರ್ಕೊಂಡು ಹೋಗಿ ಬಿಟ್ಟುಬಿಡ್ತೀನೆ."

"ಅಷ್ಟೇ ಸರಿ. ಸುಧಾ ಹೊರಕ್ಕೆ ಬಂದಿರೋದು ಯಾರಿಗೂ ತಿಳಿಯದಿದ್ದರಿಂದ ಅಲ್ಲಿನ ಮೇಟ್ರನ್ನಿಗೆ ಗೊತ್ತಿಲ್ಲದ ಹಾಗೆ ಒಳಗೆ ಬಿಡಬೇಕು."

"ವಿಚಾರ ಕಾಲುವೆಯಾಗಿದ್ದು ಈಗ ನದಿಯಾಯ್ತು!

"ಏಕೆ?" ಅಂದೆ.

"ಅವಳ ಜೊತೆ ಹುಡುಗಿ ಆಶಾಲತಾ ಕುಡಿಯುತಿದ್ದ ಹಾಲಿನಲ್ಲಿ ಸುಧಾ ಇಂಕು ಹಾಕಿದಳಂತೆ...."

"ಕೆಂಪಿಂಕು" ಅಂದಳು ಸುಧಾ.

"ನೀ ಬಾಯಿ ಮುಚ್ಚು! ಅದೇ ಪಾಂಡು ನಾ ಹೇಳ್ತಿದ್ದ ಹಾಗೆ ಆಶಾಲತ ಕುಡೀತಿದ್ದ ಹಾಲಿಗೆ ಇವಳು ಕೆಂಪಿಂಕು ಬೆರೆಸಿದಳಂತೆ. ಅದಕ್ಕೆ ಮೇಟ್ರನ್ ಇವಳಿಗೆ ಎರಡು ದಿನ ಕತ್ತಲೆ ಕೋಣೆ ಸಜಾ ವಿಧಿಸಿದ್ದಾರೆ. ಇವತ್ತು ಅವಳ ಹುಟ್ಟಿದ ದಿನ ವಾದ್ದರಿಂದ, ನಾನೇ ಅಯ್ಯೋ ಪಾಪ ಅಂತ ಉಪಾಯದಿಂದ ಹಾರಿಸಿಕೊಂಡು ಬಂದೆ

ನನ್ನ ಮೈ ಜುಂ ಎಂದಿತು. ಇಂತಹ ಹುಡುಗಿಯರು ಭಾರತ ಮಹಿಳಾ ಮಣಿಗಳಾದಂತೆಯೇ ಸರಿ! ಶೂರ್ಪನಖಿ, ಕೈಕೆ, ಮಂಥರೆ ಇವರುಗಳೇ ಮುಂದೆ ನಮ್ಮನ್ನಾಳುವ ಪೀಳಿಗೆಯಾಗುವುದರಲ್ಲಿ ಸಂಶಯವೇ ಇಲ್ಲ!

"ಸರಿ ಸುಶೀ, ಈಗಲೇ ಹೊರಡೋಣ. ನೀನೇ ಉಪಾಯದಿಂದ ನಿನ್ನ ತಂಗೀನ ಹಾಸ್ಟೆಲಿನೊಳಕ್ಕೆ ದಬ್ಬು. ಆಮೇಲೆ ಸ್ಟೇಷನ್ನಿಗೆ ಹೋಗೋಣ. ಎಲ್ಲಾ ಸರಿಹೋಗುತ್ತೆ" ಅಂದೆ ಉಪಾಯದಿಂದ.

"ಆಗೊಲ್ಲ ಪಾಂಡು, ಈಗ ನೇರವಾಗಿ ಮಲ್ಲೇಶ್ವರಕ್ಕೆ ಹೋಗಿ, ಅಲ್ಲಿ ನನ್ನ ಇಬ್ಬರು ಸ್ನೇಹಿತೆಯರು ಮತ್ತು ನನ್ನ ಬ್ಯಾಗು ಕಾರಲ್ಲಿಟ್ಟುಕೊಂಡು ಸ್ಟೇಷನ್ನಿಗೆ ಹೋಗುವ ಹೊತ್ತಿಗೆ, ರೈಲಿಗೆ ಸಮಯ ಸರಿಹೋಗುತ್ತೆ. ಆಮೇಲೆ ನೀನು ಆರಾಮ ವಾಗಿ ಸುಧಾನ ಕರ್ಕೊಂಡು ಹೋಗಿ ಬಿಟ್ಟುಬಿಡಬಹುದು"

ನಾನು ಮೊದಲೇ ಶೌರಿಯ ಕೆಮ್ಮನ್ನು ಅರ್ಥ ಮಾಡಿಕೊಂಡು, ಏನಾದರೂ ನೆಪ ಹೂಡಿ ಸುಶೀ ಎದುರಿನಿಂದ ಕಂಬಿ ಕಿತ್ತಿದ್ದರೆ ಚೆನ್ನಾಗಿತ್ತು ಅಂತ ಈಗ ನನಗನ್ನಿಸಿತು.

"ಸುಶೀಲಮ್ಮ ಹೇಳೋದು ಸರಿ ಸರ್ ಈಗಲೇ ಕಾರ್ ತಂದುಬಿಡ್ತೀನೆ" ಅನ್ನುತ್ತಾ ಶೌರಿ ಹೋದ.

"ಪಾಂಡು ನಿಂಗೇನು ತಲೆ ಹೋಗೋ ಕೆಲಸ ಹೇಳ್ತಾ ಇಲ್ಲ ನಾನು. ನಾನೂ ಕೂಡ ಲೋಕಾಂಬಾ ಬೋರ್ಡಿಂಗ್ ಶಾಲೆಯವಳೇ ಅಲ್ಲಿನ ಕತ್ತಲು ಕೋಣೇಲಿ

ನಾನು ಮಾರಗಟ್ಟಲೆ ಕಳೆದಿದ್ದೇನೆ. ನಾನು ಒಳಗಿದ್ದೇನೆ ಅಂತ ಮೇಟ್ರನ್ ತಿಳ್ಕೊಂಡಿದ್ದಾಗೆಲ್ಲಾ, ನಾನು ಕ್ರಭಾತ್‌ನಲ್ಲೋ, ಓಪೆರಾದಲ್ಲೋ ಸಿನಿಮಾ ನೋಡ್ತಾ ಇದ್ದೆ! ರಾತ್ರಿ 10 ಘಂಟೆಗೆಲ್ಲಾ ದೊಡ್ಡ ಗೇಟು ಹಾಕಿ, ದೀಪ ಆರಿಸಿ, ಬೋರ್ಡಿಂಗ್‌ನಲ್ಲೆಲ್ಲರೂ ಮಲಗುತ್ತಾರೆ. ಆಗ ಒಳಗೆ ಹೋಗೋ ಉಪಾಯ ಕೇಳು ಹೇಳ್ತೇನೆ. ಬೋರ್ಡಿಂಗ್‌ನ ಬಲಗಡೆ ಗೋಡೆ ಪಕ್ಕದಲ್ಲಿ ಒಂದು ಸೀಬೇ ಮರವಿದೆ ಅದರ ಮೇಲಿನ ಕೊಂಬೆ ಒಂದು, ಬೋರ್ಡಿಂಗ್‌ನ ಮಹಡಿಯ ಗಾಜಿನ ಕಿಟಕಿ ಹತ್ತಿರವೇ ಬಂದಿದೆ.ಒಂದು ಮಾರು ಹಗ್ಗ, 2 ಕಿಲೋಗ್ರಾಂ ತೂಕದ ಕಲ್ಲಿದ್ದರೆ ಸಾಕು ನಾನು ಸುಲಭವಾಗಿ ಯಾರಿಗೂ ತಿಳಿಯದಂತೆ ಒಳಕ್ಕೆ ಹೊರಟ್ಹೋಗ್ತಿದ್ದೆ."

"ಅದು ಹೇಗೆ ಸುಶೀ?" ಅಂತ ಕೇಳಿದೆ.

"2 ಕಿಲೋಗ್ರಾಂ ಕಲ್ಲನ್ನು, ಒಂದು ಮಾರು ಹಗ್ಗಕ್ಕೆ ಕಟ್ಟಿ, ಕಿಟಕಿ ಹತ್ತಿರದ ಕೊಂಬೆಗೆ ನೇತು ಬಿಟ್ಟು, ಎರಡು ಬಾರಿ ಉಯ್ಯಾಲೆ ಆಡಿಸಿದರೆ, ಗಾಜಿನ ಕಿಟಕಿಗೆ ಕಲ್ಲುತಾಗಿ ಚೂರಾಗುತ್ತೆ. ಅದರ ಶಬ್ದಕ್ಕೆ ಒಳಗಿಂದ ಮೇಟ್ರನ್ ಮೂವರು ಆಯಾಗಳು ಅಡಿಗೆಯವಳು ಎಂಟು ಹತ್ತು ಹುಡುಗಿಯರು ಎದ್ದು ಹೊರಗೆ ಬರುತ್ತಾರೆ. ಮುಂಬಾಗಿಲ ಬಳಿಯೇ ಅವಿತುಕೊಂಡಿದ್ದು, ನಾವು ಪುಸಕ್ಕಂತ ಆ ಗಲಾಟೇಲಿ ಒಳಗೆ ನುಗ್ಗಿದರೆ ಯಾರಿಗೂ ತಿಳೀತಿರಲಿಲ್ಲ. ಇದೇ ಉಪಾಯದಿಂದ ನೀನು ಸುಧಾನ ಒಳಗೆ ಸೇರಿಸಿದರಾಯ್ತು ಪಾಂಡು!"

ನನಗೆ ಏನೂ ಹೇಳಲು ಬಾಯಿ ಬರಲಿಲ್ಲ. ಈಗಿನ ಕಾಲದ ಹೆಣ್ಣುಮಕ್ಕಳ ಬುದ್ಧಿವಂತಿಕೆಯ ಬಗ್ಗೆ, ಹೊಸ ಇತಿಹಾಸವನ್ನೇ ನಿರ್ಮಿಸಬಹುದೆಂಬ ಯೋಚನೆಯಲ್ಲಿ ಮಗ್ನನಾಗಿದ್ದೆ.

ಸುಶೀಲಾ ತನ್ನ ಮಾತು ನಿಲ್ಲಿಸಲಿಲ್ಲ.

"ನಿಜವಾಗಿ ಪಾಂಡು ನೀನಿಲ್ಲದಿದ್ದರೆ ನಾನೇನು ಮಾಡಬೇಕಾಗಿತ್ತೋ ತಿಳಿಯದು. ಅದರಲ್ಲೂ, ಲೋಕಾಂಬಾ ಬೋರ್ಡಿಂಗ್ ಹೋಮಿನ ಮೇಟ್ರನ್, ತ್ರಿವೇಣಮ್ಮನ ಕೈಲಿ ನಾನು ಸಿಕ್ಕಿಬಿದ್ದರೆ, ಈಗ ನಾನು ಬೆಳೆದ ಹುಡುಗಿ ಅನ್ನೋದನ್ನೂ ಲೆಕ್ಕಿಸದೆ, ಹಿಂದಿನಂತೆ ಬೋರ್ಡಿಂಗ್ ಹೋಮಿನ ಪರೋಟಾ ಲಟ್ಟಣಿಗೇಲಿ ಬಾರಿಸಿ, ಆಮೇಲೆ ನಾಗತ್ತೆಗೆ ಬೇರೆ ದೂರು ಕಳಿಸೋಳು! ಬಹಳ ಥ್ಯಾಂಕ್ಸ್ ಪಾಂಡು!?

ನನ್ನ ಹೃದಯ ಎರಡು ಹೆಜ್ಜೆ ಮುಗ್ಗರಿಸಿತು.

"ಮೇಟ್ರನ್ ಯಾರು ಅಂದೆ? ತ್ರಿವೇಣಮ್ಮನೇ? ನಾಗತ್ತೆ ಅಕ್ಕನ ಮಗಳು ತ್ರಿವೇಣಮ್ಮನೇ?" ಅಂದೆ ಘಾಬರಿಯಾಗಿ.

“ ಕಾರು ತಯಾರಾಗಿದೆ ಸರ್. ಈಗಲೇ ಹೊರಟರೆ ರೈಲಿಗೆ ಸರಿಯಾದ ಹೊತ್ತಾಗುತ್ತೆ” ಅಂತ ಬಂದ ಶೌರಿ.

ಸುಶೀಲಾ ಸುಧಾನ ಎಳ್ಕೊಂಡು ಹಾರಿ ಹೋಗಿ ಕಾರಿನಲ್ಲಿ ಕುಳಿತಳು. ಕನ್ನಡ ನಾಡಿನ ಮಹಿಳಾ ಪರಂಪರೆ!

ರೈಲ್ವೆ ಸ್ಟೇಷನ್ನಿನಿಂದ ಸುಧಾನ ಕರ್ಕೊಂಡು ವಾಪಸು ಬರುವಾಗ, ನನ್ನ ಮುಂದಿನ ಕಾರ್ಯಕ್ರಮದ ಬಗ್ಗೆ, ತೀವ್ರ ಯೋಚನೆ ಹುಟ್ಟಿತು. ಲೋಕಾಂಬಾ ಬೋರ್ಡಿಂಗ್ ಶಾಲೆಯ ಮೇಟ್ರನ್ ತ್ರಿವೇಣಮ್ಮ, ನಮ್ಮ ನಾಗತ್ತೆಯ ಸ್ವಂತ ಅಕ್ಕನ ಮಗಳು. ಮದುವೆಯಾಗಿ, ಕೇವಲ ಒಂದೇ ವರ್ಷದಲ್ಲಿ ಅದೃಷ್ಟವಶಾತ್ ಆಕೆಯ ಗಂಡ ತೀರಿಕೊಂಡ. ಆಮೇಲೆ ತ್ರಿವೇಣಮ್ಮ ಓದಿ ಬಿ.ಎ. ಪಾಸುಮಾಡಿ, ಲೋಕಾಂಬಾ ಬೋರ್ಡಿಂಗ್ ಶಾಲೆಯನ್ನು ನಡೆಸುವುದಕ್ಕೆ ಶುರು ಮಾಡಿದರು. ಆಕೆಯನ್ನು ಮೇಟ್ರನ್ ಅಂತ ಕರೆದರೂ, ನ್ಯಾಯವಾಗಿ ಆಕೆಯೇ, ಬೋರ್ಡಿಂಗ್ ಶಾಲೆಯ ಪ್ರಿನ್ಸಿಪಾಲ್, ಪ್ರಾಧ್ಯಾಪಕಿ ಮತ್ತು ಮಾಲಿಕರು ತ್ರಿವೇಣಮ್ಮ ನನ್ನನ್ನು ಚಿಕ್ಕಂದಿನಿಂದ ಬಲ್ಲವರು ಈಗ ನಾನು ತೊಡಗಬೇಕೆಂದಿರುವ ಕಾರ್ಯದಲ್ಲಿ, ಅವರ ಕೈಗೆ ಸಿಕ್ಕಿಬಿದ್ದರೆ ನನಗೆ ಉಳುಬಾಳೀ ಇಲ್ಲ. ವೇಷ ಬದಲಾಯಿಸಿಕೊಂಡು ಹಿಮಾಲಯದ ತಪ್ಪಲಿಗೆ ಹೋಗುವುದೊಂದೇ ಕೆಲಸ ನನಗೆ ಉಳಿದೀತು! ಆದರೆ ಈ ಬಾಲ ಪೂತನಿ ಸುಧಾನ ಕಟ್ಟಿಕೊಂಡು ಹೆಚ್ಚು ಕಾಲ ಕಳೆಯುವುದೂ ಸಾಧ್ಯವಿಲ್ಲ. ಎಲ್ಲಕ್ಕೂ ಮೇಲಾಗಿ ನಾನಾಗಿ ಸಿಕ್ಕಿಬಿದ್ದಿರುವ ಭಾವಿಯಿಂದ ಮೇಲಕ್ಕೆತ್ತಲು ಶೌರಿಯ ಸಹಾಯ ಕೇಳುವಂತಿಲ್ಲ!! ನನ್ನ ಪರಿಸ್ಥಿತಿ, ಗಂಧರ್ವ ರಾಜನ ಕೈಗೆ ಸಿಕ್ಕಿಬಿದ್ದಿದ್ದ ದುರ್ಯೋಧನನ ಪರಿಸ್ಥಿತಿ ಇದ್ದ ಹಾಗಿತ್ತು!

“ ಶೌರೀ ” ಅಂದೆ.

ಅವನೇ ಓಪೆಲ್ ಚಕ್ರ ಹಿಡಿದಿದ್ದ ನಾನು ಅವನ ಪಕ್ಕದಲ್ಲಿದ್ದೆ. ಸುಧಾ ಹಿಂದಿನ ಸೀಟಲ್ಲಿದ್ದಳು.

“ ಸರ್ ” ಅಂದ.

“ ಒಂದು ಮಾರು ಉದ್ದದ ಹಗ್ಗ, ಎರಡು ಕಿಲೋಗ್ರಾಂ ತೂಕದ ಒಂದು ಕಲ್ಲು ಕೂಡಲೇ ತಂದುಕೊಡು ”

“ ಆಗಲಿ ಸರ್ ”

“ ಏಕೆ ಗೊತ್ತೇ ಶೌರಿ ? ”

“ ಗೊತ್ತಿಲ್ಲ ಸರ್ ”

“ ಈ....ಶ....ಮಗೂನ ಲೋಕಾಂಬಾ ಬೋರ್ಡಿಂಗ್‌ನಲ್ಲಿ ಬಿಡೋಕೆ ”

" ಹಗ್ಗ ಏಕೆ ಸರ್ ?"

" ನೀನು ಈ ಪ್ರಶ್ನೆ ಕೇಳ್ತೀ ಅಂತ ಗೊತ್ತು ಶೌರಿ. ಕೇಳು ನನ್ನ ಉಪಾಯ ನಿನಗೆ ಮುಂದೆ ಯಾವುದಾದರೂ ಸಂದರ್ಭದಲ್ಲಿ ಉಪಯೋಗವಾಗುತ್ತೆ...."

" ಅಂತಹ ಸಂದರ್ಭ ನನಗೆ ಒದಗಲಾರದು ಸರ್"

" ಕೇಳು ಶೌರಿ ನನ್ನ ಅನುಭವದಲ್ಲಿ, ಸಾಧಾರಣವಾಗಿ, ಈ ಬೋರ್ಡಿಂಗ್ ಶಾಲೆಗಳ ಕಾಂಪೌಂಡ್‌ನಲ್ಲಿ ಒಂದು ಜೇಪೇಕಾಯಿಮರ ಇದ್ದೇ ಇರುತ್ತೆ. ಸಾಧಾರಣ ವಾಗಿ ಆ ಮರದ ಮೇಲಿನ ಕೊಂಬೆ, ಒಂದು ಗಾಜಿನ ಕಿಟಕಿ ಹತ್ತಿರ ಬೆಳದೇ ಇರುತ್ತೆ. ನನ್ನ ಮಾತು ನಿಜವೋ ಸುಳ್ಳೋ ಕೇಳು, ಸುಧಾ ಹೇಳಮ್ಮ ನಿಮ್ಮ ಬೋರ್ಡಿಂಗ್ ನಲ್ಲಿ ಒಂದು ಜೇಪೇ ಮರ ಇದೆಯೋ ಇಲ್ಲವೋ ?"

" ಇದೆ. ಅದರ ಕೊಂಬೆ ಮಹಡಿ ರೂಮಿನ ಕಿಟಕಿ ಹತ್ರಾನೆ ಬಂದಿದೆ" ಅಂದಳು ಸುಧಾ.

" ನೋಡಿದೆಯಾ ಪಾಂಡು? ಅಂತಹ ಕೊಂಬೆಗೆ 2 ಕಿ. ಗ್ರಾಂ. ಕಲ್ಲನ್ನು ಕಟ್ಟಿದ್ದ ಮಾರುದ್ದ ಉದ್ದದ ಹಗ್ಗ ನೇತುಬಿಟ್ಟು, ಒಂದು ಬಾರಿ ಜೋರಾಗಿ ತೂಗು ಬಿಟ್ಟರೆ ಸರಿಯಾಗಿ ಕೇಳು ಶೌರಿ ತೂಗು ಬಿಟ್ಟರೆ, ಕಿಟಕಿಯ ಗಾಜು ಢಂ ಅಂತ ಒಡೆಯುತ್ತೆ ಆ ಶಬ್ದಕ್ಕೆ ರಾತ್ರಿಯಲ್ಲಿ ನಿದ್ರಿಸುತ್ತಿರೋ ಆಯಾಗಳು, ಮೇಟ್ರನ್ ಮತ್ತು ಬಾಲಿಕೆಯರೆಲ್ಲಾ ಎದ್ದು ಹೊರಗೆ ಓಡಿಬರ್ತಾರೆ....ಆ ಗಲಾಟೇಲಿ ಸುಧಾನ ಒಳಕ್ಕೆ ನುಗ್ಗಿಸಿಬಿಡಬಹುದು. ನಾನು ಹಗ್ಗದ ಕೆಲಸ ಮಾಡ್ತೀನೆ ನೀನು ಸುಧಾನ ಹೆಬ್ಬಾಗಿಲ ಹತ್ತಿರ ಮರೆಯಲ್ಲಿಟ್ಟುಕೊಂಡಿದ್ದರೆ ಸಾಕು ಶೌರಿ" ಅಂದೆ.

ನಾನು ನೆನೆಸಿದಷ್ಟು ಪರಿಣಾಮ, ಶೌರಿಯ ಮೇಲೆ ಆಗಲಿಲ್ಲ.

" ಇದು ಗಂಡಾಂತರ ಸರ್. ಅದಕ್ಕಿಂತಲೂ ಸುಲಭವಾಗಿ ಮಾಡಬಹುದು ಸರ್."

" ಶೌರಿ ನನ್ನ ಹಗ್ಗ ಕಲ್ಲಿನ ಯೋಜನೆ ಭಾರತದ ಪಾಂಚವಾರ್ಷಿಕ ಯೋಜನೆ ಯಷ್ಟು ಘಟ್ಟಿಮುಟ್ಟಾಗಿದೆ. ಹಾಗೂ ತ್ರಿವೇಣಮ್ಮ ಇರೋ ಜಾಗದಲ್ಲಿ ಗಂಡಾಂತರ ಎಂದಿಗೂ ತಪ್ಪಿದ್ದಲ್ಲ ಶೌರಿ. ಒಂದು ಮಾರು ಉದ್ದದ ಹಗ್ಗ, ಎರಡು ಕಿ.ಗ್ರಾಂ. ತೂಕದ ಕಲ್ಲು ತಾ"

" ಸರಿ ಸರ್" ಅಂದ.

ಇಷ್ಟೆಲ್ಲಾ ಸಂಭಾಷಣೆ ನಡೆಯುತ್ತಿದ್ದರೂ, ಸುಧಾ ಕಾರಿನಲ್ಲಿ ಕಲ್ಲಿನ ಮೂದೇವಿಯ ಹಾಗೆ ಕುಳಿತ್ತಿದ್ದಳು. ಒಂದು ಕ್ಷಣ ನನಗನ್ನಿಸಿತು 2 ಕಿ. ಗ್ರಾಂ. ಕಲ್ಲಿಗೆ ಬದಲಾಗಿ, ಸುಧಾಳನ್ನೇ ಏಕೆ ಹಗ್ಗಕ್ಕೆ ಕಟ್ಟಿ, ಏಕೆ ತೂಗು ಬಿಡಬಾರದು ಅಂತ! ಆದರೆ ಮರುಕ್ಷಣವೇ ಹೌದೋ ಅಲ್ಲವೋ ಅನ್ನುವ ಹಾಗೆ ನನ್ನ ಮನಸ್ಸಿನಲ್ಲಿ ಅವಳ ಮೇಲೆ ಕನಿಕರವೂ ಹಾದು ಹೋಯ್ತು! ಗಂಡಸಿನ ಹೃದಯ!

ಶೌರಿಯನ್ನೂ, ಸುಧಾಳನ್ನೂ ಹೊರಬಾಗಿಲ ಹತ್ತಿರ ನಿಲ್ಲಿಸಿ, 2 ಕಿ. ಗ್ರಾಂ. ತೂಕದ ಕಲ್ಲನ್ನು ಕಟ್ಟಿದ ಮಾರು ಹಗ್ಗದೊಡನೆ ಚೇಪೇಮರ ಹುಡುಕಿ, ಹತ್ತಿದೆ. ಬೆಳದಿಂಗಳು ಇದ್ದುದರಿಂದ ಕೆಲಸ ಸುಲಭವಾಯ್ತು. ಕಿಟಕಿಯನ್ನು ಗುರ್ತಿಸಿ, ಅದರ ಹತ್ತಿರದ ಕೊಂಬೆಗೆ ಹಗ್ಗವನ್ನೂ ನೇತುಬಿಟ್ಟೆ. ಆ ಕ್ಷಣದಲ್ಲಿ ನನಗೆ ಈಗಿನ ಕಾಲದ ಹೆಣ್ಣುಮಕ್ಕಳ ಚಾತುರ್ಯದ ಬಗ್ಗೆ ಹೆಮ್ಮೆ ಬಂತು! ಇನ್ನೇನು ಕಲ್ಲನ್ನು ತೂಗು ಬಿಡಬೇಕು ಅನ್ನುವಷ್ಟರಲ್ಲಿ ನನ್ನ ಮುಖಕ್ಕೆ ಮಿಂಚು ಹೊಡೆಯಿತು!

ಎರಡು ಕ್ಷಣ ಅಲ್ಲೇ ಜ್ಞಾನ ತಪ್ಪಿದ ಹಾಗಾಯ್ತು. ನಾನು ಚೇತರಿಸಿಕೊಂಡಾಗ, ಮರದಡಿಯಲ್ಲಿ ಒಬ್ಬ ಪೋಲೀಸಿನವ ಟಾರ್ಚನ್ನು ನನ್ನ ಮುಖಕ್ಕೆ ಹಿಡಿದು ನಿಂತಿದ್ದ.

“ಇಳಿಯಯ್ಯಾ ಕೆಳಕ್ಕೆ!” ಅಂದ.

ಇಳಿದೆ.

“ಷಹಬಾಸ್! ನೀನೇನೋ ಈ ನಡುವೆ ಈ ಹೆಣ್ಣುಮಕ್ಕಳ ಶಾಲೆಯ ಹತ್ತಿರ ಓಡಾಡ್ತಿರೋದು? ಬಹಳ ದಿನಗಳಿಂದ ಕಾದಿದ್ದೆ ನಿಂಗೆ! ಬಾ ಬೊಗಳು ನಿನ್ನ ಹೆಸರೇನು?”

“ಪ....ಪ....ಪಾ....ಪಾಂಡು” ಅಂದ ಜ್ಞಾಪಕ.

“ಇದುವರಿವಿಗೂ ಎಷ್ಟು ಬಾರಿ ಜೈಲಿಗೆ ಹೋಗಿದ್ದಿ? ಆ ಮೂಲೇಲಿರೋ ಕಾರು ಎಲ್ಲಿಂದ ಹಾರಿಸಿ ತಂದೆ? ಎಷ್ಟು ದಿನದಿಂದ ಈ ಕಸುಬು ಮಾಡ್ತಿದ್ದಿ?”

ನಾನು ಸುಮ್ಮನಿದ್ದೆ.

“ಬೊಗಳ್ತೀಯೋ ಇಲ್ಲಾ ಶಾಂತಿ ಮಾಡಬೇಕೋ?” ಅನ್ನುತ್ತಾ ಬೆಲ್ಟು ಬಿಚ್ಚಿದ.

ಹಿಂದುಗಡೆ ಚೇಪೇಮರದ ಕೆಳಗೆ ಧೊಪ್! ಅಂತ ಏನೋ ಬಿದ್ದ ಶಬ್ದವಾಯ್ತು. ಪೋಲೀಸಿನವ ನನ್ನ ಕೈಬಿಟ್ಟು ಆ ಕಡೆ ನಡೆದ. ಮರಕ್ಕೆ ಟಾರ್ಚ್ ಬಿಟ್ಟ ಏನೂ ಕಾಣಿಸಲಿಲ್ಲ ಪ್ರಾಯಶಃ ಅವನಿಗೆ ಮರ ಕಂಡಿದ್ದೇ ಹೆಚ್ಚು ಅಂತ ಕಾಣುತ್ತೆ! ಪುನಃ ನನ್ನ ಕಡೆ ಬಂದ.

“ನಿನ್ನ ಹೆಸರೇನು ಅಂತ ಹೇಳಿದೆ?” ಅನ್ನುತ್ತಾ ಒಂದು ಸಣ್ಣ ಪುಸ್ತಕ ತೆಗೆದ.

“ಯಾಕೆ ಸರ್ ಅವರ ಹೆಸರು?”

ಶೌರಿಯ ಧ್ವನಿ ಕೇಳಿ ಇಬ್ಬರೂ ತಿರುಗಿದೆವು.

“ನೀನಾರಯ್ಯ?” ಪೋಲೀಸಿನವ ಶೌರಿಯನ್ನು ಕೇಳಿದ.

" ನಾನು ಶೌರಿ. ಪಾಂಡುರಂಗರಾಯರ ಕೈಟ್ರು"

" ಹೋ! ದರೋಡೆಕಾರನಿಗೆ ರೈಟ್ರೊಬ್ಬ!"

" ಅದಿರಲಿ–ನೀನು ಬಾಯಿಮುಚ್ಚು. ಮೇಟ್ರನ್ ಬರ್ತಾರೆ ಅವರ ಮುಂದೆ ಮುಂದಿನ ವಿಚಾರಣೆ ನಡೆಯಲಿ" ಅಂದ ಶೌರಿ.

ನನ್ನ ಕಾಲಡಿ, ಭೂಮಿ ಜಾರಿದ ಹಾಗಾಯ್ತು!

ತ್ರಿವೇಣಮ್ಮ ಇಬ್ಬರು ಆಯಾಗಳು ಬಂದರು. ಪೋಲೀಸಿನವ ನಮಸ್ಕರಿಸಿ ಹಿಂದೆ ಸರಿದ.

" ಓಹೋ ಪಾಂಡು ನಿನ್ನ ಗುಮಾಸ್ತೆ ಹೇಳಿದ ಈ ಕಡೆ ಹೋಗ್ತಿದ್ದಾಗ ಈ ಕಾಂಪೌಂಡಿನಲ್ಲಿ ಯಾರೋ ಓಡಾಡ್ತಿದ್ದ ಹಾಗಾಯ್ತಂದೆ ನೀನು ಮರದ ಮೇಲೆ ಅವಿತುಕೊಂಡು ನನ್ನ ಎಚ್ಚರಿಸೋಕೆ ಈತನ್ನ ಕಳಿಸಿ ಕೊಟ್ಟೆಯಂತೆ!" ಅಂದರು ತ್ರಿವೇಣಮ್ಮ.

ಶೌರಿಯೇ ಮಾತನಾಡಿದ.

" ಅದೇನೋ ಶಬ್ದವಾಯ್ತಮ್ಮಾ ನೀವು ರಾಮಪುರದ ನಾಗಮ್ಮನೋರ ಅಕ್ಕನ ಮಗಳು ಅಂತ ಮಾತನಾಡಿಸಿ ಹೋಗೋಣ ಅಂತ ಇಲ್ಲಿಗೇ ಬರ್ತಿದ್ದೋರು ಗುಮಾ ನಿಯ ಮೇಲೆ ಮರಹತ್ತಿ ಅವಿತುಕೊಂಡರು. ನನ್ನನ್ನು ನಿಮ್ಮಲ್ಲಿಗೆ ಕಳುಹಿಸಿದರು."

" ಕಳ್ಳ ಸಿಕ್ಕಿದನೆ?"

ಶೌರಿ ಮರದಡಿಯಲ್ಲಿ ಬಿದ್ದಿದ್ದ 2 ಕಿ.ಗ್ರಾಂ. ತೂಕದ ಕಲ್ಲು ಕಟ್ಟಿದ ಮಾರು ಹಗ್ಗ ತಂದು ತ್ರಿವೇಣಮ್ಮನ ಕೈಗೆ ಕೊಟ್ಟ. ತ್ರಿವೇಣಮ್ಮ ಸ್ಥಂಬಿತರಾದರು.

" ಅಬ್ಬ! ಇದನ್ನು ನೋಡಿದರೆ ಇವತ್ತು ಆ ದುರಾತ್ಮರು ಏನೋ ಖೂನಿ ಮಾಡೋಕೇ ಹವಣಿಸಿಕೊಂಡಿದ್ದರೂಂತ ಕಾಣುತ್ತೆ! ಪಾಂಡು ನಿನ್ನ ಧೈರ್ಯ ಅಸಾಧ್ಯವಪ್ಪಾ! ನಾಗು ಚಿಕ್ಕಮ್ಮನಿಗೆ ಈ ವಿಷಯ ಬರೀತೀನಿ ಪಾಂಡು! ಓಹೋ ಪೋಲೀಸು! ನೀನೇನ್ಮಾಡ್ತಾ ಇದ್ದೀಯಪ್ಪಾ ಇಲ್ಲಿ?"

ಇದಕ್ಕೆ ನನ್ನ ಹತ್ತಿರ ಉತ್ತರವಿತ್ತು.

" ಈತ ನನ್ನನ್ನ ಕಳ್ಳ ಅಂತ ತಿಳ್ಕೊಂಡು ಬಂಧಿಸಿದ್ದ" ಅಂದೆ.

" ಶುದ್ಧ ಅವಿವೇಕಿಗಳು! ಇದುವರಿವಿಗೂ ಐವತ್ತುಬಾರಿ ನಮ್ಮ ಗಾಜಿನ ಕಿಟಕಿ ಒಡೆದಿದ್ದಾರೆ ಯಾರೋ ಕಳ್ಳರು ಒಂದು ಬಾರಿ ಇವರ ಕೈಲಿ ಕಳ್ಳನ್ನ ಹಿಡಿಯಲಿಕ್ಕಾ ಗಿಲ್ಲ. ನಿನ್ನಂತಾ ಸದ್ಗೃಹಸ್ತರನ್ನ ಹಿಡಿದು ಹಿಂಸೆ ಮಾಡ್ತಾರೆ! ಏನು ಮಕ ಮಕ ನೋಡ್ತಾ ಇದ್ದಿ? ಹೋಗು! ಹಿಡಿ ಕಳ್ಳನ್ನಾ?"

ಪೋಲೀಸಿನವ ಹ್ಯಾಪ್‌ಮೋರೆ ಹಾಕ್ಕೊಂಡು ಜಾರಿದ.

ಬೋರ್ಡಿಂಗ್‌ನಲ್ಲಿ ತ್ರಿವೇಣಮ್ಮ ನನಗೆ ಶೌರಿಗೆ ಕಾಫಿ ಮಾಡಿಸಿ, ಕುಡಿಸಿ ಕಳುಹಿಸಿದರು.

"ಶೌರಿ"

"ಸರ್"

"ಆ ಮೂದೇವಿ ಎಲ್ಲಿ?"

"ಕತ್ತಲೆ ಕೋಣೆಯಲ್ಲಿದ್ದಾಳೆ ಸರ್"

"ಹೇಗೆ ಒಳಗೆ ಬಿಟ್ಟೆ ಶೌರಿ?"

"ನೇರವಾಗಿ ಹೊರಬಾಗಿಲ ಹತ್ತಿರವಿದ್ದ ಕಾಲಿಂಗ್‌ಬೆಲ್ಲಿನ ಗುಂಡಿ ಅಮುಕಿದೆ ಸರ್ ಆಯಾ ಬಾಗಿಲು ತೆಗೆದಳು. ಮೈಸೂರಿನಿಂದ ತ್ರಿವೇಣಮ್ಮನವರ ನೆಂಟರು ಕಾರಲ್ಲಿ ಬಂದಿದ್ದಾರೆ ಅಂತ ಹೇಳಿ ಕಳುಹಿಸಿದೆ ಸರ್ ಆಯಾ ಮಹಡಿ ಮೇಲಕ್ಕೆ ಹೋಗಿದ್ದಾಗ, ಸುಧಾ ನನ್ನ ಹಿಂದೆ ಮರೆಯಲ್ಲಿದ್ದವಳು ಒಳಗೆ ಸೇರಿಕೊಂಡಳು. ತ್ರಿವೇಣಮ್ಮ ಬರುತ್ತಲೂ ಗುಮಾನಿಯ ಮೇಲೆ ನಾವಿಬ್ಬರೂ ಇಲ್ಲಿಗೆ ಬಂದ ವಿಷಯ ತಿಳಿಸಿದೆ ಸರ್."

"ಶೌರಿ ನಿನ್ನ ಮಾತು ಮೊದಲೇ ಕೇಳಿದ್ದರೆ ಈ ತಾಪತ್ರಯವೆಲ್ಲಾ ಇರ್ತಿ ರ್ಲಿಲ್ಲಾ ಅಲ್ವೆ?"

"ಆದರೆ ನಾಗಮ್ಮನವರಿಗೆ ನಿಮ್ಮ ಮೇಲೆ ಒಂದು ಬಾರಿಯಾದರೂ ಒಳ್ಳೆಯ ವರದಿ ಹೋಗುವ ಹಾಗಾಯ್ತಲ್ಲಾ ಸರ್!"

"ನಿಜ ಶೌರಿ. ಭುಜಂಗರಾಯರ ಮತ್ತು ಪೀತಾಂಬರ ಉಪಾಧ್ಯಾಯರ ಪ್ರಸಂಗಗಳು ನಡೆದಮೇಲೆ, ನನ್ನ ಮರ್ಯಾದೆ ಬಹಳ ಕೆಳಮಟ್ಟದಲ್ಲಿತ್ತು. ಎಲಾ ಎಲ್ಲಾ ಒಳ್ಳೆಯದಕ್ಕೇ ಅಲ್ಲವೆ ಶೌರಿ?"

"ಹೌದು ಸರ್" ಅಂದ.

—"ಕೇಫ"

ಸರಸ ಸಂಭಾಷಣೆ

"ಅಡಿಗೆ ಮನೆಯಲಿ ಏನೋ ಗದ್ದಲ
ನೋಡಿ ಇರಬಹುದು ಕಳ್ಳ...."
"ಬಡಿಯ ಬೇಡ ನನ್ನ, ಮೂಷಿಕ ದಲ
ಬೆಂಡೆ ಗೊಜ್ಜಲಿ ತೋಡುತಿರಬಹುದು ಹಳ್ಳ"

"ಅಷ್ಟಾವಕ್ರ"

ಒಂದು ಪ್ರಯೋಗ

ಅಮೇರಿಕದಲ್ಲಿ ಕಲಾವಿದನೊಬ್ಬ ಒಂದು ಕಪಿಯನ್ನು ಸಾಕಿದ್ದನಂತೆ. ಆ ಕಪಿ ಕುಂಚ ತೆಗೆದುಕೊಂಡು ರೇಖೆಗಳನ್ನೆಳೆಯುವುದು, ಬಣ್ಣಬಳಿಯುವುದು ಆಕೃತಿಗಳನ್ನು ಬಿಡಿಸುವುದು ಮೊದಲಾದವನ್ನು ಕಲಿತಿತಂತೆ. ಅದು ಗೀಚಿದ ಕೃತಿಗಳೆಲ್ಲ ನವ ಕಲೆಯ ಸಂಪ್ರದಾಯಕ್ಕೆ ಸೇರಿದವುಗಳಾಗಿದ್ದವೆಂದು ಬೇರೆ ಹೇಳಬೇಕಾಗಿಲ್ಲ ಸರಿ ಕಪಿ ಬಿಡಿಸಿದ ಅಂಥ ಚಿತ್ರಗಳನ್ನೆಲ್ಲ ಕೂಡಿಸಿ ಅದರದೇ ಒಂದು ಕಲಾಪ್ರದರ್ಶನ ಕೂಡ ನಡೆಯಿತಂತೆ. ಅಷ್ಟೇ ಅಲ್ಲ ಕಪಿಯ Modern Art ಕೃತಿಗಳಿಗೆ ಜನ ಭಾರೀ ಬೆಲೆ ಕೊಡಲು ಮುಂದೆ ಬಂದರಂತೆ. ಆದರೆ ಕಪಿಯ ಚಿತ್ರಗಳ one man shop ಅಲ್ಲ one monkey show ಏರ್ಪಾಡು ಕೇಳಿ ಆ ಕಡೆಯ ನವ್ಯ ಕಲಾವಿದರೆಲ್ಲ ತಮಗೆ ಅವಮಾನವಾಯಿತೆಂದು ಬಲು ರೇಗಿ ಪ್ರತಿಭಟಿಸಿದರಂತೆ.

ಕಲಾವಿದರು ರೇಗಿದ ಸಮಾಚಾರ ಇರಲಿ ಪ್ರತಿ ಸ್ಪರ್ಧಿಗಳನ್ನು ಕಂಡರೆ ಯಾರಾದರೂ ಹಾಗೆಯೇ. ಆದರೆ ಕಪಿ one man show ನೆರವೇರಿಸಿಕೊಂಡಿದ್ದನ್ನು ಕಾಣುವಾಗ ಅದರ ಸಂತಾನದವರನ್ನು ಪ್ರಾಯೋಗಿಕವಾಗಿ ಬೇರೆ ಕೆಲವು ದಂಧೆಗಳಿಗೆ ಹಚ್ಚಿನೋಡಿ ಪರಿಣಾಮವನ್ನು ನಿರೀಕ್ಷಿಸಬಹುದೆನಿಸುತ್ತದೆ.

ಉದಾಹರಣೆಗಾಗಿ ಕಪಿಯನ್ನು ಸಚಿವಸ್ಥಾನದಲ್ಲಿ ಮುಖ್ಯ ಸಚಿವ ಸ್ಥಾನದಲ್ಲಿ ವೈಸ್ ಚಾನ್ಸಲರ್ ಸ್ಥಾನದಲ್ಲಿ ಅಥವಾ ಇನ್ನಾವದಾದರೂ ಹಿರಿಯಧಿಕಾರಿಯ ಸ್ಥಾನದಲ್ಲಿ ಕುಳ್ಳಿರಿಸಿ ನೋಡಿದರೆ ಸ್ವಾರಸ್ಯವಾದ ಅಂಶಗಳು ಹೊರಬೀಳಬಹುದು. ಎಷ್ಟೇ ಸ್ಥಾನಗಳು ಭರ್ತಿಯಾಗಿದ್ದರೂ ಒಂದೇ, ಖಾಲಿಯಿದ್ದರೂ ಒಂದೇ, ಎಂಬ ಭಾವನೆ ನಮ್ಮಲ್ಲನೇಕರಿಗಿದೆ. ಅದು ನಿಜವೋ ಎಂಬುದನ್ನು ಪರೀಕ್ಷಿಸಿ ನೋಡಲು ಕಪಿಗೆ ಪ್ರಾಯೋಗಿಕವಾಗಿ ಪಟ್ಟಕಟ್ಟುವುದೇ ಉಪಾಯ. ಡಾಕ್ಟರೇ ಇಲ್ಲದ ಆಸ್ಪತ್ರೆಗಳು ಎಷ್ಟೋ ಇವೆಯಂತೆ ನಮ್ಮ ದೇಶದಲ್ಲಿ. ಮೇಸ್ಟರೆ ಇಲ್ಲದ ಕ್ಲಾಸುಗಳು ಎಷೋ ಸ್ಕೂಲುಗಳಲ್ಲಿರುವುದುಂಟಂತೆ ಮೇಸ್ಟರಿಲ್ಲದ ಕ್ಲಾಸೆಂದರೆ ಹೇಗೂ ಕಿಷ್ಕಿಂಧೆಯೇ ಸರಿ ಅಲ್ಲಿ ಅಧ್ಯಕ್ಷತೆ ವಹಿಸಲು ಯಾರು ಬೇಕೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಹಿರಿಯ ಸ್ಥಾನಗಳಲ್ಲಿ ಒಳ್ಳೆ initiative ಇರುವ ಕಪಿಯನ್ನು ನೇಮಿಸಿದರೆ ಅದರ ಅಧಿಕಾರಾವಧಿಯಲ್ಲಿ ದೇಶದಲ್ಲಿ ಯಾವ ಅನರ್ಥವೂ ಆಗದೆಂದು ಕೊಂಚ ಭರವಸೆಯಿಂದಲೇ ಹೇಳಬಹುದು. ಎಲ್ಲವೂ ಮೊದಲಿನಂತೆಯೇ ನಡೆಯುವುದಕ್ಕಾದರೂ ಅಡ್ಡಿಯಿಲ್ಲ. ಆದರೆ ಈ ಪ್ರಯೋಗದಿಂದ ಸಂಬಂಧಪಟ್ಟ ದೊಡ್ಡ ಮನುಷ್ಯರು ತಮಗೆ ಮುಖಭಂಗವಾಯಿತೆಂದು ಅಮೇರಿಕದ ನವ್ಯ ಕಲಾವಿದರ ಹಾಗೆ ರೇಗಬಹುದೋ ಏನೋ. ಹಾಗಿದ್ದರೂ ಸ್ಥಾನಾರ್ಥಿಗಳ ಸಂಖ್ಯೆ ತಗ್ಗುವುದಿದ್ದರೆ ಅವರು ರೇಗಿದ್ದರಿಂದ ಚಿಂತೆಯಿಲ್ಲ. ಈ ಪ್ರಯೋಗ ಸ್ವಾಗತಾರ್ಹವೇ ಸರಿ.

ಓದದೆ ಇದ್ದರೂ

ಪ್ರಭಾವ ಬೀರಿದ ಪುಸ್ತಕಗಳು

ಮಂಚೇನಹಳ್ಳಿ ಶಾನುಭೋಗರು ವರ್ಷಕ್ಕೆ ಮುನ್ನೂರು ರೂಪಾಯಿ ಪೋಟಿಗೆ ಪಡೆಯುತ್ತಿದ್ದವರು. ಭೂಮಿ ಕಾಣಿ ಇತ್ತು. ಜೀವನ ಸುಖವಾಗಿತ್ತು. ಅವರು ತಮ್ಮ ಊರಿನಲ್ಲಿ ಪಶು ಚಿಕಿತ್ಸಾ ಕೇಂದ್ರಕ್ಕೆಂದು ಒಂದು ಲಕ್ಷ ರೂಪಾಯಿಗಳನ್ನು ಧರ್ಮ ಮಾಡಿದರು. ಆ ಸುದ್ದಿಯು ಹೆದ್ದಕ್ಷರಗಳಲ್ಲಿ ಪ್ರಕಟವಾಯಿತು. ಪಶುಗಳಿಗೆ ಆಸ್ಪತ್ರೆ, ಅವುಗಳ ಆಹಾರವಿಹಾರಗಳಿಗೆ ಅವುಗಳನ್ನು ಸುರಕ್ಷಿತವಾಗಿ ಇರಿಸಿ ಕಾಪಾಡುವ ಹೊಣೆಹೊತ್ತ ವೈದ್ಯರುಗಳಿಗೆ ಮನೆಗಳು, ಆ ವೈದ್ಯರುಗಳಿಗೆ ಆ ವೈದ್ಯರ ಸಂಸಾರಗಳಿಗೆ ಬೇಕಾದಷ್ಟು ಆಹಾರ ವಿಹಾರ ವಸತಿ ಸೌಕರ್ಯಗಳನ್ನು ಎಲ್ಲ ಕಾಲದಲ್ಲೂ ಒದಗಿಸುವಷ್ಟು ಬಡ್ಡಿಯನ್ನು ದುಡಿಯುವಷ್ಟು ಮೂಲಭಂಡವಾಳವನ್ನು ಅವರು ಧರ್ಮಮಾಡಿದರು ಎಂದು ತಿಳಿದಾಗ ಅವರ ಭೇಟಿಗೆ ಓಡೋಡಿ ಹೋದೆ.

ಮಂಚೇನಹಳ್ಳಿಗೆ ಹೋದಾಗ ಬೆಳಗಿನ ಝಾಮು ಐದೂವರೆ ಗಂಟೆಯಾಗಿತ್ತು ರೈಲಿನಿಂದ ಹತ್ತಿರದ ಸ್ಟೇಷನ್ನಿನಲ್ಲಿ ಇಳಿದು ಗಂಟುಮೂಟೆ ಹೊತ್ತುಕೊಂಡು ಹಳ್ಳಿಯನ್ನು ಸೇರುವಾಗ ಊರಬಾಗಿಲಿಲ್ಲಿದ್ದ ಅಶ್ವತ್ಥ ಮರದಮೇಲೆ ಹಕ್ಕಿಗಳೆಲ್ಲವೂ ಚಿಲಿಪಿಲಿ ದನಿ ಗೈಯುತ್ತಿದ್ದುವು. ಅಶ್ವತ್ಥಕಟ್ಟೆಯಮೇಲೆ ಹೆಣ್ಣುಮಗಳೊಬ್ಬಳು ಪ್ರದಕ್ಷಿಣೆ ಹಾಕುತ್ತಿದ್ದಳು. ಶಾನುಭೋಗರಮನೆ ಎಲ್ಲಮ್ಮ ಅಂತ ಆಕೆಯನ್ನು ಕೇಳಿದೆ. ಇದೇ ದಾರೀಲಿ ನೇರನೆ ಹೋಗಿ. ಬಲಭಾಗದಲ್ಲಿ ತ್ರಿಯಂಬಕದ ದೇವಸ್ಥಾನ ಸಿಗುತ್ತೆ. ಅದರ ಎದುರಿಗೇ ಹದಿನೆಂಟು ಅಂಕಣದ ದೊಡ್ಡ ಮನೆ ಇದೆ. "ಸುವಾಸಿನೀ ಅಗರಬತ್ತಿ ಕಾರ್ಖಾನೆ" ಅಂತ ತೂಗು ಹಲಗೆ ಹಾಕಿದೆ. ಆ ಮನೆಯ ಬಲಗಡೆಯ ಗಲ್ಲಿಯಲ್ಲಿ ಹತ್ತು ಹೆಜ್ಜೆ ಹಾಕಿದರೆ ಶಾನುಭೋಗರ ನಿವಾಸ ಕಾಣಿಸುತ್ತೆ ಬಾಗಿಲಲ್ಲೇ ಎರಡು ನಾಯಿಗಳು ಬೊಗಳುತ್ತಾ ಬಾಲ ಆಡಿಸುತ್ತ ಸ್ವಾಗತಿಸುತ್ತೆ. ಬೊಗಳುವ ನಾಯಿಗಳು ಕಚ್ಚಲ್ಲ. ಆ ನಾಯಿಗಳಿಗೂ ಅದು ಗೊತ್ತು. ಧೈರ್ಯವಾಗಿ ಮನೆ ಅಂಗಳಕ್ಕೆ ಹೋಗಿ ಶ್ಯಾನುಭೋಗರು ಸಿಕ್ಕುತ್ತಾರೆ" ಅಂತ ಆಕಿ ಬಡಬಡಿಸುತ್ತಾ ಪ್ರದಕ್ಷಿಣೆಯನ್ನು ಮುಂದುವರಿಸಿದಳು.

ಆಕೆ ಹೇಳಿದಂತೆ ನಡೆದು ಹೋದೆ. ಶಾನುಭೋಗರು ಆದರದಿಂದ ತಮ್ಮನೆಯೊಳಕ್ಕೆ ಕರೆದುಕೊಂಡು ಹೋದರು. ವಿಶ್ವಾಸದಿಂದ ಆತಿಥ್ಯ ನಡೆಸಿದರು. ನಂತರ ಮಾತುಕಥೆಗಳನ್ನು ಶುರು ಮಾಡಿದೆವು.

"ಸ್ವಾಮೀ! ತಾವು ಒಂದು ಲಕ್ಷ ರೂಪಾಯಿಗಳನ್ನು ಪಶು ಚಿಕಿತ್ಸಾ ಕೇಂದ್ರಕ್ಕೆ ಧರ್ಮಾರ್ಥ ಕೊಟ್ಟಿರುವಿರಂತೆ. ಇಷ್ಟು ಹಣ ನಿಮಗೆ ಹೇಗೆ ಬಂತು?" ಎಂದು ಕೇಳಿಯೇಬಿಟ್ಟೆ ನನ್ನ ಬಡತನ ನನ್ನ ಬಾಯಿಯನ್ನು ತುಂಬ ತೆರೆಸಿತ್ತು, ತೆರೆದ ಬಾಯಿಗೆ ನಾಚಿಕೆ ಇರುತ್ತೇ? ಚಾಚಿದ ಅಂಗೈಯ್ಯಿಗೆ ಅವಮಾನದ ಹುಣ್ಣು ತಾಕದೇ ಇರುತ್ತೇ?"

ಆ ಹೊತ್ತಿಗೆ ರವಿವರ್ಮನ ಚಿತ್ರದ ತರಹ ಕಾಣುತ್ತಾ ಇದ್ದ, ಒಬ್ಬಾಕೆ ಎತ್ತಿ ಮೊಳಗೈ ಬಗ್ಗಿಸಿದ್ದ ಬಲಗೈಯಲ್ಲಿ ತಟ್ಟೆಯನ್ನು ಹಿಡಿದುಕೊಂಡು ಮನೆಯೊಳಕ್ಕೆ ಬಂದಳು. ದೇವರ ಮನೆಗೆ ಹಜಾರವನ್ನು ದಾಟಿ ಹೊಗುವತನಕ ಆಕೆಯನ್ನೇ ಎವೆಯಿಕ್ಕದೆ ನೋಡುತ್ತಿದ್ದ ಶಾನುಭೋಗರು ಆನಂತರ ಉತ್ತರ ನುಡಿದರು. "ಈಗ ಹೋದಳಲ್ಲಾ! ಆಕೆಯ ಪುಣ್ಯದಿಂದಲೇ ಎಲ್ಲವೂ ಈ ಮನೆಯಲ್ಲಿ ಆಗಿದೆ" ಎಂದು ಹೇಳಿದರು.

ಅಶ್ವತ್ಥ ಪ್ರದಕ್ಷಿಣೆ ಹಾಕುವ ಆಕೆಯಿಂದ ಮನೆಯಾತ ಕೋಟ್ಯಾಧೀಶ್ವರ ನಾಗುತ್ತಾನೆ ಎನ್ನುವುದು ನನಗೆ ಸರಿಕಾಣಲಿಲ್ಲ "ಇದು ಹೇಗೆ" ಎಂದು ಅನುಮಾನ ನನ್ನ ಮುಖವನ್ನು ತುಂಬಿರಬೇಕು. ಅದನ್ನು ನೋಡಿಯೇ ಶಾನುಭೋಗರು "ಬನ್ನಿ ನಮ್ಮ ಅಗರಬತ್ತಿ ಕಾರ್ಖಾನೆಯನ್ನು ನೋಡಿ ಬರೋಣ" ಎಂದರು.

ಮುಂದಿದ್ದ ದೊಡ್ಡ ವಠಾರದ ಮನೆಯನ್ನು ಇಬ್ಬರೂ ಹೊಕ್ಕೆವು.

* * * *

ನೂರಾರು ಮಂದಿ ಹೆಣ್ಣುಮಕ್ಕಳು ತೆಳು ಕಡ್ಡಿಗಳಿಗೆ ಗಂಧದ ಅಂಟು ಮಣ್ಣು ಹುಡಿಯನ್ನು ಲೇಪಿಸುತ್ತಿದ್ದರು. ಹತ್ತಾರು ಮಂದಿ ಹೆಣ್ಣು ಮಕ್ಕಳು ಗಂಧದ ಕಡ್ಡಿಗಳನ್ನು ಒಟ್ಟು ಗೂಡಿಸಿ ಕಟ್ಟುತ್ತಿದ್ದರು ಇಷ್ಟೆಲ್ಲಾ ಜನರು ಇಲ್ಲಿ ದುಡಿಯಬಹುದು ಎಂದು ನನಗೆ ಅನ್ನಿಸಿರಲಿಲ್ಲ.

"ಎಷ್ಟು ಜನ ಹೆಣ್ಣುಮಕ್ಕಳು ಕೆಲಸಮಾಡುತ್ತಾರೆ" ಎಂದು ಕೇಳಿದೆ.

"ಆರನೂರು" ಅಂತ ಅಂದರು ಶಾನುಭೋಗರು.

"ಎಲ್ಲಾ ನಿಮ್ಮ ಜಾತಿಯವರೇನೋ" ಎಂದೆ.

"ಹೌದು!" ಅಂದರು "ಎಲ್ಲರೂ ನಮ್ಮ ಹೆಣ್ಣುಜಾತಿಯವರೇ" ಅಂದರು ಶಾನುಭೋಗರು "ಇಷ್ಟೆಲ್ಲಾ ಲಕ್ಷಾಂತರ ಕಡ್ಡಿಗಳನ್ನು ತಯಾರಿಸುತ್ತೀರಲ್ಲಾ. ಎಲ್ಲ ವನ್ನು ಮಾರುಕ್ಕೆ ಸಾಧ್ಯವೇ?" ಎಂದು ಕೇಳಿದೆ.

" ಸುವಾಸಿನಿ ಅಗರಬತ್ತಿಗಳಿಗೆ ಲೋಕದಲ್ಲೆಲ್ಲಿಂದಲೂ ಬರುವ ಬೇಡಿಕೆಗಳಲ್ಲಿ ನೂರರಲ್ಲಿ ಎಂಭತ್ತರಷ್ಟು ಸರಬರಾಜಿಸಲು ಸಾಧ್ಯವಿಲ್ಲ ನಮಗೆ " ಎಂದರು ಶಾನುಭೋಗರು.

" ನಿಮ್ಮ ಉದ್ಯಮದ ಈ ಸೌಭಾಗ್ಯಕ್ಕೆ ಯಾವುದು ಮೂಲಭೂತ ಕಾರಣ ? ಯಾವುದು ಪ್ರೇರೇಪಿಸಿದ್ದು " ಎಂದು ಕೇಳಿದೆ.

" ಪುಸ್ತಕ ! ನಾನು ಓದದೆ ಇದ್ದರೂ ಕೇಳಿದ ಒಂದು ಪುಸ್ತಕದ ಪದ್ಯ " ಅಂದರು ಶ್ಯಾನುಭೋಗರು " ಉದ್ಗ್ರಂಥ ಅದು ಯಾವುದೋ " ಎಂದು ಕೇಳಿದೆ. ಪದ್ಯದ ಸಾಲಾವುದು? ಎಂದೆ. ಗ್ರಂಥದ ಹೆಸರು ಬಾಲಭೋದೆ. ಮೊದಲನೆ ಪುಸ್ತಕ.

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ಣಾಟ ದೇಶದಿ
ಇರುವ ಕಾಳಿಂಗ ನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು "

ಎಂದು ಶ್ಯಾನುಭೋಗರು ಹೇಳಿದರು.

" ಆ ಪದ್ಯಕ್ಕೂ ನಿಮ್ಮ ಬಾಳಿನ ಹೊಂಬೆಳಕಿಗೂ ಏನು ಸಂಬಂಧ " ಎಂದೆ

ಕಾಳಿಂಗೇಗೌಡರ ಮಗಳನ್ನೇ ನಾನು ಮದುವೆಯಾಗಿದ್ದು. ಆಕೇನೇ ಅಗರಬತ್ತಿಗೆ ಹಚ್ಚುವ ಸುವಾಸಿನಿ ಗಂಧವನ್ನು ಅರೆದು ಕೊಟ್ಟಿದ್ದು. ಅರೆದುಕೊಟ್ಟು ಅಗರಬತ್ತಿ ಕಾರ್ಖಾನೆ ಸ್ಥಾಪಿಸಿ ಎಂದು ಆಕೆಯೇ ಸಲಹೆ ಮಾಡಿದ್ದು ಏಳೋ ಎಂಟೋ ವರ್ಷಗಳಾಗಿರಬಹುದು ಆರೇಳು ಲಕ್ಷ ಸಂಪಾದನೆಯಾಗಿದೆ ಮಕ್ಕಳಿಲ್ಲದ ಒಂದು ಬೆಳಗಿನ ಝಾಮ ಅಶ್ವತ್ಥ ಪ್ರದಕ್ಷಿಣೆಗೆ ಹೋಗುವ ಮೊದಲು ಆಕೆಹೇಳಿದಳು ಪಶು ಜೀವನ ನಮ್ಮದು ಮಾತನಾಡೋ ಪಶುಗಳು ನಾವು. ನಾವು ಗಳಿಸಿದ್ದನ್ನೆಲ್ಲಾ ಮೂಕ ಪ್ರಾಣಿಗಳಿಗೆ ದಾರೆ ಎರೆಯೋಣ ಎಂದಳು. ಅದಕ್ಕೇ ಒಂದು ಈ ಪಶು ಕೇಂದ್ರದ ಸ್ಥಾಪನೆಗೆ ಮನಸ್ಸು ಮಾಡಿದೆ ಎಂದರು ಶಾನುಭೋಗರು.

ಅಶ್ವತ್ಥ ಪ್ರದಕ್ಷಿಣೆ ಹಾಕಿ ಮಕ್ಕಳನ್ನು ಬೇಡುತ್ತಾ ಕೂಡಿ ಗಳಿಸಿಟ್ಟದ್ದು ದನೆಲ್ಲಾ ಶಾಶ್ವತದ ಪಶುಗಳಿಗೆ ಪಶುಪತಿಯ ಹೆಸರಿಟ್ಟು ಬಿಡುಗೈಯ್ಯಿಂದ ಕೊಟ್ಟ ಕಾಳಿಂಗ ರಾಯನ ಮಗಳು ಆಕೆಯ ಗಂಡ ಶ್ಯಾನುಭೋಗನ ಸೋಜಿಗ ಜೀವನವನ್ನೇ ನೆನೆಸುತ್ತಾ ಬಂದೆ.

ಪ್ರಭಾವ ಹೇಗೆ ಓದದೇ ಇದ್ದರೂ ಕೇಳಿದ ಪುಸ್ತಕಗಳಿಂದಲೂ ಬೀರಿಬರುತ್ತೆ ಎಂಬುದರ ತಿಳಿವು ಕಾಣಿಸಿತು.

—ಪ್ರಸಾದ್

ಗಂಡ ತನ್ನ ಹೆಂಡತಿಗೆ ಧರ್ಮಚಕ್ರದ ಹತ್ತಿರ:


ಧರ್ಮಶಾಲೆಯಲ್ಲಿ ಕೇಳು
ಮದುವೆಯ ಮುಮ್ಮೇಳ
ಮುಂದೆ ನಡೆವ ಮಗಳೆ ಹೇಳು
ಏಕೆ 'ನಿನ್ನ' ಮಗುವಿನ ಹಿಮ್ಮೇಳ

* * * *

ಆದಕ್ಕೆ ಹೆಂಡತಿ ಉತ್ತರ:

ಊದಬಹುದು ಒಲವಿನ ವಾದ್ಯಗೋಷ್ಠಿ
ಆಗಿದ ಅಡಿಗೆ ಬನ್ನಿರಿ ಮನೆಗೆ
ಸಾಕಾಗಿದೆ ನಿಮ್ಮ ಸಾಕುವುದು ನನಗೆ
ಪೂರಿ ಹಪ್ಪಳ ಶಾವಿಗೆಕೀರು ಭೋಜನ ಸಮಷ್ಟಿ

—"ಅಷ್ಟಾವಕ್ರ".



ಗಾಳಿಗೋಪುರಕ್ಕೆ ಹೋಗುವ ವಾಹನಗಳು.

ಗಾಂಪರ ಗುಂಪು

" ವೀಕ್ ಹೆಂಡ್ "

ಹೊರಗಡೆ ಚುಮು ಚುಮು ಹನಿಯುತ್ತಿತ್ತು. ಶೀತಳ ಗಾಳಿಗೆ ಮೈಯೊಡ್ಡಿದ್ದರೆ ಸೆಟೆದು ನೇರವಾಗಿ ಸ್ವರ್ಗದ ದಾರಿ ಹಿಡಿಯಬಹುದಾದಂತಹ ಚಳಿ. ಪಿಯಾನೋ ವಾದನದ ಹಿತವಾದ ಟಿಂಗ್ ಟಾಂಗ್ ಶಬ್ದ ಮಾಡುತ್ತಿದ್ದ ಕೆದರು ಗೂದಲಿನ ಹೆಂಗಸೊಂದು ಟೆಲಿವಿಷನ್ ಗಾಜಿನ ಮೇಲೆ ಮೂಡಿ ಬಂದಿದ್ದಳು. ಗಾಂಪರೊಡೆಯರು ಉರಿಯುತ್ತಿದ್ದ ಅಗ್ಗಿಷ್ಟಿಕೆಯ ಮುಂದೆ ಸೊಫಾ ಜರುಗಿಸಿ ಕೈ ಕಾಸಿಕೊಳ್ಳುತ್ತಿದ್ದರು. ಕಲ್ಲಿದ್ದಿಲು ಖಣ ಖಣನೆ ಉರಿಯುತ್ತಿದ್ದು ಅದರ ಕಾಂತಿ ಗಾಂಪರ ಮುಖವನ್ನೂ ತೇಜಸ್ಸಿನಿಂದ ತುಂಬಿಸಿತ್ತು.

ಗುರುಗಳ ತಲೆಯಲ್ಲಿ ಅನೇಕ ಭಾವನೆಗಳು ತುಂಬಿ ತಲೆ ನೋವನ್ನು ತಂದಿತ್ತು. ಇಂಗ್ಲೆಂಡು ರೋಸಿ ಹೋಗಿತ್ತು. ಊರಿಗೆ ಹಿಂದಿರುಗಬೇಕೆಂಬ ಬಯಕೆ ತವರೂರಿಗೆ ಹೊರಡುವ ಮೊದಲ ಸಲ ಗಂಡನ ಮನೆಗೆ ಬಂದ ಹೆಂಡತಿಯ ಬಯಕೆಯಂತೆ ಹೆಡೆಯಾಡಿಸುತ್ತಿತ್ತು. ಶಿಷ್ಯರೆಲ್ಲಾ ಆಗಲೇ ನೋಡಬೇಕಾದ್ದೇನೂ ಇಲ್ಲ-ಇದ್ದರೂ ನೋಡಿದಷ್ಟೇ ಸಾಕು"-ಎಂದು ರಗಳೆ ಹಿಡಿದ ರಾಗದಲ್ಲಿ ಹೇಳಿದ್ದರು. ಹೊರಡ ಬೇಕಾದಾಗ ಇದ್ದ ಹುರುಪು ಹೋದ ಮೇಲೆ 'ಅಯ್ಯೋ ಪುಸ್ಯ' ಎಂದೆನ್ನುವಂತೆ ಮಾಯವಾಗಿತ್ತು.

" ನೀವೇನೇ ಹೇಳಿ ಗುರುಗಳೆ-ನಮ್ಮೂರೇ ಚಂದ"

—ಎಂದ ಮಂಕ.

" ಇಲ್ಲಿ ಏನೂ ಒಳ್ಳೆಯದೇ ಇಲ್ಲವೇ-ವರ್ಷಾನುವರ್ಷ ಇಲ್ಲಿಗೆ ಬರಲು ಹಾತೊರೆಯುತ್ತಾ ಹುಚ್ಚರಂತೆ ನಮ್ಮವರು ಇಲ್ಲಿಗೆ ಬರುವುದರಲ್ಲಿ ಅರ್ಥವಿಲ್ಲವೇ ಮಂಕ"

" ಅನರ್ಥವಿದೆ ಗುರುಗಳೇ ಅರ್ಥವಿಲ್ಲ. ವಿಜ್ಞಾನದ ಬಗ್ಗೆ ವರ್ಷಗಟ್ಟಲೆ ರಿಸರ್ಚು ಎಂದು ಬಂದವರು ತಮ್ಮ ಹಾರ್ಟುಗಳನ್ನೇ ಸರ್ಚು ಮಾಡಿಕೊಂಡು ಹಿಂದಿರುಗುವ ವಿದ್ಯಾರ್ಥಿಗಳನ್ನು ನಾವು ಇಂಡಿಯಾ ಕ್ಲಬ್ಬಿನಲ್ಲಿ ಕಂಡಿಲ್ಲವೆ?.... ನನಗೇನೋ ಅಲ್ಲಿಲ್ಲದ್ದು ಇಲ್ಲೇನೂ ಇಲ್ಲ-ಎಂದೇ ಅನ್ನಿಸುತ್ತೆ"

" ಇಲ್ಲಿರುವುದು ಅಲ್ಲಿ ಎಲ್ಲಿ ಸಿಗಬೇಕಪ್ಪಾ"

—ಎಂದು ದೊರಸಾನಿಯ ಕಡೆ ಕಣ್ಣು ಹಾಯಿಸಿ ಕಣ್ಣು ಚಿವುಟಿದ ಮರುಳ.

" ಮತ್ತೆ ಕೊಂಚ ಹೊತ್ತು ಮೌನ ಆವರಿಸಿತು.

ದಿಕ್ಕೆಟ್ಟ ಬೇವಾರ್ಸಿನಾಯಿ ಕಾರಿರುಳಿನಲ್ಲಿ ಮುಗಿಲತ್ತ ಮೂತಿ ಎತ್ತಿ, ತನ್ನ ವಿಫಲ ಪ್ರೇಮದ ನೆನಹು ಮರುಕಳಿಸಿದಂತೆ "ಅಯ್ಯಯ್ಯೊಂ" ಎಂದು ಕೂಗ ತೊಡಗಿತೇನು? ಅಥವ ಟೆಲಿವಿಷನ್ನಿನಲ್ಲಿ ಮಕ್ಕಳ ಕಾರ್ಯಕ್ರಮದಲ್ಲಿ ಲಂಡನ್ ಜೂ ತೋರಿಸಿದಾಗ ಅಲ್ಲಿದ್ದ ಒರ್‍ಯಾಂಗುಟ್ಯಾನ್ಗ ಎಂಬ ನರವಾನರ ನರನತ್ತ ನೋಡಿ ವದ್ಯಾಡಿಕೂಗಿತೇ!-ಅಲ್ಲ ಆ ವಾನವನ್ನು ಸೀಳಿದ್ದು ಮಡ್ಡಿಯ ಗಂಟಲು ಅವನು ಗಟ್ಟಿಯಾಗಿ ಅಳುತ್ತಿದ್ದ-ಬಂಬ್ಡಿ ಹೊಡೆಯುತ್ತಿದ್ದ-ರೋಧಿಸುತ್ತಿದ್ದ.

" ದಿಗ್ಭ್ರಮೆಯಾಯ್ತು-ಏನೂಂತ-ನೀನೇ-ಯಾಕೊ ಅಳ್ತಿಯಾ?"

" ಊರಿಗೇ ವಾಪಸ್ಸು ಹೋಗಬೇಕು-ನಮ್ಮೂರು ಗಿಡದ ಚೇಪೇಕಾಯಿ-ಹುಳಿ ಚೇಪೆಕಾಯಿ-ಹುರಿಗಾಳು ತಿನ್ನಬೇಕೂೂೂ...."

—ಎಂದು ಅತ್ತೆ ಅತ್ತ. ನಿಜವಾದ ಮಾನವ ಉದ್ವೇಗವನ್ನೂ, ಸಹಜ ಭೋಳೇ ಸ್ವಭಾವದ ಮಡ್ಡಿ ನಿರ್ಭಯವಾಗಿ ಅತ್ತು ತೋಡಿಕೊಂಡಿದ್ದ. ಇದೇರೀತಿ ಗುರುಗಳಿಗೂ ಅತ್ತುಬಿಡಬೇಕೆಂದು ಊಟಕ್ಕೆ ಕೂತಾಗಲೆಲ್ಲಾ ಅನ್ನಿಸುತ್ತಿತ್ತು ಆದರೆ ಮಡ್ಡಿಯ ಧೈರ್ಯ ಅವನ ಮಗುವಿನಂತಹ ಸ್ವಭಾವವನ್ನು ಗುರುಗಳು ತಂದುಕೊಳ್ಳ ಲಾಗದೆ ಪರಿತಪಿಸಿದರು.

" ಸುಮ್ಗೆ ಬಾಯಿಮುಚ್ಗಂಡಿರಲೇ"-ಎಂದ ಮಂಕ. ಹೀಗೆಂಬಾಗ ಅವನಿಗೂ ಅತ್ತುಬಿಡುವ ಮನಸ್ಸಾಗಿತ್ತು.

" ನೀನು ಅತ್ತು ನನಗೂ ಊರನ್ನ ನೆನಸ್ಕೊಂಡು ಅಳೋ ಹಾಗೆ ಮಾಡಬ್ಯಾಡ ಸುಮ್ಗಿರೋ"

—ಎಂದು ಅಳುವ ಗದ್ಗದಕಂಠದಲ್ಲಿಯೇ ಕೊರಗಿದ ಮರುಳ. ಒಟ್ಟಿನಲ್ಲಿ ಎಲ್ಲರೂ ಅಳಬೇಡಿ ಎಂದು ಒಬ್ಬರನ್ನೊಬ್ಬರು ತಬ್ಬಿಕೊಂಡು ಹೇಳಿಕೊಳ್ಳುತ್ತಾ ಅತ್ತು ಸಮಾಧಾನ ಹೊಂದಿದರು.

" ಡಿಯರ್ ಯುಲ್‌ಬ್ರೀನ್-ನಿಮಗೆಲ್ಲಾ ಆಗಲೇ ಈ ಥಂಡಿ ಊರು ಬೇಜಾ ರಾಗಿದ್ದು ಕಾಣ್ತಾ ಇದೆ ಈ ವೀಕ್ ಎಂಡಿಗೆ ಕಡಲತೀರವಾದ ಉತ್ತರವಾದ ಬ್ಲ್ಯಾಕ್ ಪೂಲಿಗೆ ಹೋಗೋಣವೇ?"

" ಅಲ್ಲೇನು ವಿಶೇಷ?

" ಅದು ಮೋಜು ನೋಡುವವರಿಗೆ-ವಿಹಾರಾರ್ಥಿಗಳಿಗೆ ಬಹು ಸೊಗಸಾದ ಜಾಗ-ಈಗತಾನೆ ಸೀಜನ್ನು ಪ್ರಾರಂಭವಾಗಿದೆ-ದೀಪೋತ್ಸವ ನಡೆಯುತ್ತೆ ಹೋಗಿ ನೋಡೋಣಂತೆ-ಹ್ಯಾಗಿದ್ದರೂ ಇವತ್ತು ಗುರುವಾರ ನಾಳೆ ಹೊರಟರೆ ಶನಿವಾರ, ಭಾನುವಾರವಿದ್ದು ಸೋಮವಾರ ವಾಪಸ್ಸು ಬಂದು ಬಿಡೋಣಂತೆ"

" ವೀಕ್ ಎಂಡ್....ಅಂದರೆ ವಾರದ ಕೊನೆ?"

—ನಿರುದ್ಯೋಗಿಗಳಾಗಿ ಊರು ತಿರುಗಿ ಬಂದ ಗಾಂಪರೊಡೆಯರಿಗೆ ದಿನವೂ ವೀಕ್ ಎಂಡೇ....ಆದರೂ ಬ್ರಿಟಿಷ್ ದ್ವೀಪದಲ್ಲಿ ಪ್ರತಿ ಶನಿವಾರ, ಭಾನುವಾರ ಎಲ್ಲ ಆಫೀಸು ಕಾರ್ಖಾನೆಗಳಿಗೂ ರಜ. ವಾರದಲ್ಲಿ ಐದೇ ದಿನ ಇಲ್ಲಿ ಕೆಲಸ. ಶನಿವಾರ ಭಾನುವಾರ ವೀಕ್ ಎಂಡ್.

" ಗುರುಗಳೇ ಇಲ್ಲಿ ಶನಿವಾರ, ಭಾನುವಾರ ರಜಾ ಕೊಡುವುದು ನೋಡಿದರೆ ನಮ್ಮೂರೇ ವಾಸಿ, ವಾರಕ್ಕೆ-ಒಂದೇ ದಿನ ರಜ"

" ಹೌದು ಮಂಕಾ ಆದರೆ ನಮ್ಮಲ್ಲಿರುವಷ್ಟು ರಜಾದಿನಗಳು ಇಲ್ಲುಂಟೆ? ಡೊರ್‍ಥಿನೀ ನಿಮ್ಮಲ್ಲಿ ವರ್ಷಕ್ಕೆ ಎಷ್ಟು ರಜ...."

" ಅಯ್ಯೋ ಇಲ್ಲಿ ವರ್ಷಕ್ಕೆರಡೇ ರಜ-ಬ್ಯಾಂಕ್ ಹಾಲಿಡೆ ಒಂದು-ಕ್ರಿಸ್‌ಮಸ್ ಒಂದು-ಆಗ್ಹೋಯ್ತು"–ಎಂದು ಇಂಗ್ಲೀಷಲ್ಲಿ ಹೇಳಿದಳು.

" ಅಷ್ಟೇನೇ-ನೋಡಿ-ಬಲಿಪಾಡ್ಯ-ಭಾವನ ಬಿದಿಗೆ-ಅಕ್ಕನ ತದಿಗೆ-ಗಣೇಶಚೌತಿ-ಗರುಡಪಂಚಮಿ-ಇಮುಷಿ ಪಂಚಮಿ-ನಾಗಪಂಚಮಿ-ಸುಬ್ರಾಯನ ಷಷ್ಠಿ-ಮುರುಗೇಶ ಸಪ್ತಮಿ-ಕೃಷ್ಣಾಷ್ಟಮಿ-ಶ್ರೀರಾಮನವಮಿ-ವಿಜಯದಶಮಿ-ಸರ್ವತ್ರ ಏಕಾದಶಿ-ಮಾಧ್ವ ದ್ವಾದಶಿ-ಪಿತೃ ತ್ರಯೋದಶಿ-ಲವಣ ಚತುರ್ಥಿ-ಮಹಾಲಯ ಅಮಾವಾಸ್ಯೆ-ಒಂದೇ ಎರಡೇ ಇದರ ಮೇಲೆ-ಉಗಾದಿ-ತಗಾದಿ-ಇಂಡಿಪೆಂಡನ್ಸಿ ಡೇ-ಗಾಂಧೀಜಿ ಬರ್ತ್‌ಡೆ-ಸಿಕ್‌ಲೀವ್-ಕ್ಯಾಷುಯಲ್ ಲೀವ್ ಕ್ರಿಸ್‌ಮಸ್-ಆಲಿದೂಲ್ಯ ಮೊಹರಂ-ಮತ್ತೇ...."

—ಎಂದು ನಮ್ಮಲ್ಲಿನ ರಜಾದಿನಗಳ ಪಟ್ಟಿಯನ್ನು ಹೇಳತೊಡಗಿದ್ದ ಮಡೆಯ.

" ಏನು ಇಷ್ಟೊಂದು ರಜಗಳೇ"–ಡೊರ್‍ಥಿನಿ

" ಇವು ಕೇವಲ ಆಫೀಸಿನವು-ಇನ್ನೂ ಇಸ್ಕೂಲಲ್ಲಿ ರಜವೋ-ತಾವೇ ತೆಗೆಯುವ ರಜ ..ಪಿಂಡೆ ರಜ " ದಂಡ ರಜ"

" ಹಾಗಂದರೆ ಕೆಲಸದ ದಿನಗಳಿಗಿಂತ ರಜದ ದಿನಗಳೇ ಹೆಚ್ಚಾಗಿರುವಂತೆ ತೋರುತ್ತಿದಲ್ಲಾ"–ಡೊರ್‍ಥಿನಿ.

" ಹೌದು ಕೆಲವು ಪ್ರೈಮರಿ ಸ್ಕೂಲುಗಳಲ್ಲಿ ರಜಗಳೇ ಹೆಚ್ಚಾಗಿದ್ದು–ಶಾಲೆ ಇರುವ ದಿನಗಳನ್ನು ಗೊತ್ತು ಮಾಡುವುದೇ ಕಷ್ಟವಾಗುತ್ತದೆ."

" ಈ ಪಾಟಿ ರಜಾ ಇರೋಹೊತ್ತಿಗೇ ಉತ್ಪನ್ನ ಕಡಿಮೆ ಆಗಿರೋದಲ್ಲವೆ ಗುರುಗಳೇ?"

" ಉತ್ಪನ್ನ ಕಡಿಮೆ ಆಗಿಯೇ ಈ ಪಾಟಿ ದುಡ್ಡಿರೋರು ರೊಕ್ಕದ ಕೊಪ್ಪರಿಗೆ ಹೆಚ್ಚಿಸ್ತಾ ಇದಾರೇ ಇನ್ನೂ ಇಲ್ಲಿ ಇಂಗ್ಲೆಂಡಿನಲ್ಲಿರೋ ಹಾಗೆ ರಜವಿಲ್ಲದೆ ದುಡಿದರೆ

ಬಂಡವಾಳಗಾರರನ್ನು ಹಿಡಿಯೋರೋ ಇರೋಲ್ಲ ಅಲ್ಲವೆ ಗುರುಗಳೇ?"–ಎಂದ ಮಂಕ.

"ಸರಿ ಸರಿ – ಇವನ ಮಾತೇ ಹೀಗೆ ಸದಾ ದುಡ್ಡಿರೋರನ್ನ ಕಂಡ್ರೆ ಬಡ್ಕೊತಾನೆ...."

"ಬೇಡ ಎಲ್ಲಾ ಆ ಯಂಥ್ರಾ–ಸೇಠ್‌ಜಿಗಳ ಬಾಯಿಗೆ ಇಕ್ಕಿ ಸಾಯಿ...."

ದೇವರ ಇಚ್ಛೆ – ನಮ್ಮ ಕರ್ಮ – ಜಾತಕ ಫಲ – ಅಂಗೈರೇಖೆಯಂತೆ ನಮ್ಮ ನಮ್ಮ ಸ್ಥಿತಿಗಳು – ಗತಿಗಳು ಇರುತ್ತವಲ್ಲದೆ ಮತ್ತೇನೂ ಅಲ್ಲ" – ಎಂದು ಗುರುಗಳು ಕರ್ಮದ ಕಡೆಗೇ ಬಂದರು.

—ಈ ಮಾತು ಹೀಗೇ ಎಲ್ಲಿಗೆ ಹೋಗಿ ಎಲ್ಲಿಗೆ ಬರುತ್ತಿತ್ತೋ ಅಷ್ಟರಲ್ಲಿ ದೊರ್‍ಸಾನಿ "ಮೈಡಿಯರ್ ಹಾಗಾದರೆ ನಾಳೆ ಹೊರಟು ಬಿಡೋಣವೆ ಬ್ಲಾಕ್ ಪೂಲಿಗೆ?"

"ಅಲ್ಲಿ ನಮ್ಮೂರ ಮಸಾಲೆ ವಡೆ – ಪಕೋಡ ಸಿಕ್ಕುತ್ತದೋ?"

"ಅಲ್ಲಿ ಸಿಕ್ಕುವ ನೋಟ – ಕಡುತೀರದ ಆಟ – ಯಾವ ಮಸಾಲೆ ದೋಸೆ ರುಚಿಗೂ ಕಡಿಮೆಯಿಲ್ಲ" – ಎಂದಳು ದೊರ್‍ಸಾನಿ. ಟೆಲಿವಿಷನ್ನಿನಲ್ಲಿ ಯಾವುದೋ ವೆಸ್ಟರ್ನ್ ಟೆಕ್ಸಾಸ್ ಕಥೆ ನಡೆದಿತ್ತು. ಮಂಕ ಮಡೆಯ ಮರುಳರು ಕೇವಲ ಬಚ್ಚಾಗಳಂತೆ ಈ ಕವ್ ಬಾಯ್ ಚಿತ್ರಗಳಿಗೆ ಮಾರು ಹೋಗಿದ್ದರು.

ಅಮೆರಿಕದ ಸಾಹಸದ ಈ ದನಕಾಯುವವರ ಕಥೆಗಳು ಸಾಂಕ್ರಾಮಿಕ ಕಾಯಿಲೆಯಂತೆ ಹರಡಿದ್ದುದು ಸ್ಪಷ್ಟವಾಗಿತ್ತು. ಆ ಬ್ರಿಟನ್ನಿನ ಹಳೆಯ ಪರಂಪರೆ ಯಲ್ಲಿ ತೊಳಲುವ ಹಿಂದಿನ ಜನಾಂಗ – ಅಮೆರಿಕದ ಅನುಕರಣೆಯ ಇಂದಿನ ಯುವಜನ ನಡುವೆ ನಡೆಯುತ್ತಿದ್ದ ಜೀವನ ನಾಟಕದ ಸ್ಪಷ್ಟ ಕಲ್ಪನೆಯನ್ನು ಬ್ಲ್ಯಾಕ್ ಪೂಲ್ ಕಡಲ ತೀರದ ವಿಹಾರ ಕೇಂದ್ರದಲ್ಲಿ ನೋಡುವುದನ್ನು ಊಹಿಸುತ್ತಾ ತೂಕಡಿಸುತ್ತಾ T. V. ಮುಂದೆ ಕೂತಿತ್ತು ಗಾಂಪರ ಗುಂಪು.

ಅಂದಿನ ಸುದ್ದಿ ಹೇಳಲು ಟೆಲಿವಿಷನ್ನಿನಲ್ಲಿ ವಾರ್ತಾ ಓದುಗ ಬಂದು ನಿಂತ. ಹವಾಮಾನ ಕೇಳಿ – ಮರು ದಿನ ಬ್ಲಾಕ್ ಪೂಲ್ ಸರಹದ್ದಿನಲ್ಲಿ ಮಳೆ ಗಾಳಿ ಮಂಜುಗಳುಂಟೇ ಎಂದು ಖಚಿತಪಡಿಸಿಕೊಂಡು "ನಾಳೆ ಹೊರಡುವ"

—ಎಂದರು ಗುರುಗಳು.

"B.B.C. ಟೆಲಿವಿಷನ್ನಿನ ಹವಾಮಾನ ನಂಬಿದರೆ ದೇವರೇ ಗತಿ ಚುಮು ಚುಮು ಮಳೆ ಎಂದರೆ ಎಳೆ ಬಿಸಿಲು ಗ್ಯಾರಂಟಿ" ಎಂದು ನಗೆಯಾಡಿದಳು ದೊರ್‍ಸಾನಕ್ಕ.

" ಇಲ್ಲಿಯೂ ಹಾಗೆಯೋ ನಮ್ಮೂರಲ್ಲೂ ಅಷ್ಟೆ. A I.R ನಂಬಿ ಕೊಡೆ ರೆಡಿ ಮಾಡಿಕೊಂಡರೆ ಮಳೆ ಬರೋದೇ ಇಲ್ಲ" ನಮ್ಮಲ್ಲೂ ಹಾಗೇ ಎಂದು ಧ್ವನಿ ಗೂಡಿಸಿದರು.

ಮರುಳ ಮಂಕ ಇತ್ಯಾದಿಗಳ್ ಹಾಗೇ ಒರಗಿ ನಿರ್ದಿಸುತ್ತಿದ್ದಾರ್-ದೊರ್ಸಾನಿ ಆಕಳಿಸಿದಳ್ – ಗುರುಗಳ್ ಗುಡ್‌ನೈಟ್ ಎನ್ನುತ್ತಿರಲ್ಕೆ ಟೆಲಿವಿಷನ್ನು ನಂ ಆಫ್ ಗೈದು, ಗಾಂಪರೊಡೆಯರ್ ಗಾಳಿನೋಳ್ ಬ್ಲಾಕ್ ಪೂಲ್‌ಗೆ ಐದು ಕಡಲ ತೀರದಲಿ ಹುಡುಗಾಟಿಕೆಯಾಡುವುದೆಂಬ ನಿರ್ಧಾರದೊಡನೆ ಶಿಷ್ಯರೊಡಗೂಡಿ ಮಂಚವನೇರಿ ನಿದ್ರೈಗೈದರ್.

* * * *

ಮರುದಿನ ಬ್ರೆಕ್‌ಫಾಸ್ಟ್ ಸಮಯಕ್ಕೆ ಎಲ್ಲರೂ ಬ್ರೆಡ್ಡಿಗೆ ಉಳಿದ ಉಪ್ಪಿನ ಕಾಯಿ ಚಟ್ನಿಪುಡಿ ಬೆಣ್ಣೆ ಸವರಿಕೊಂಡು ತಿಂದು ಬ್ಲಾಕ್‌ಪೂಲಿಗೆ ಹೊರಡಲು ಕೈ ಚೀಲಗಳಿಂದ ಕಾಲು ಚೀಲಗಳನ್ನು ಸರಿಪಡಿಸಿಕೊಂಡು ಹೊರಟರು.

" ದೊರ್ಸಾನೀ ಯಾವ ಸ್ಟೇಷನ್ನಲ್ಲಿ ರೈಲು ಹತ್ತಬೇಕು?"

" ಈಸ್ಟನ್ ಸ್ಟೇಷನ್ನಿಗೆ ಅಂಡರ್‌ಗ್ರೌಂಡ್‌ನಲ್ಲಿ ಹೋಗಿಬಿಡೋಣ. ಅಲ್ಲಿಂದ ಮುಂದೆ ಲ್ಯಾಂಕ್‌ಷೈರ್‌ನಲ್ಲಿನ ಪ್ರೆಸ್ಟಿನ್‌ಗೆ ಹೋಗಿ ಅಲ್ಲಿಂದ ಬ್ಲಾಕ್‌ಪೂಲ್‌ಗೆ ಹೋಗಬೇಕು."

" ಏಯ್ ಭ್ಲಾಕ್‌ಫೂಲ್ ಹಾಗ್ಯಾಕೆ ಒಂದೇ ಸಮ ಆ ಬ್ರೆಡ್ಡಿನ ತುಂಡು ಅಗಿತಿದ್ದೀಯಾ ..."— ಎಂದು ಮರುಳನನ್ನು ಗದರಿದರು. ಈ ಕೂಗಿಗೆ ಮರುಳ ಗಾಬರಿಯಾಗಿ ಬಾಯಲ್ಲಿನ ಬ್ರೆಡ್ಡಿನ ತುಂಡನ್ನು ಗಬಕ್ಕನೆ ನುಂಗಲು ಯತ್ನಿಸಿ ಕೈಗೆ ಹತ್ತಿದ್ದ ಬೆಣ್ಣೆಯನ್ನು ಉಣ್ಣೆ ಷರಾಯಿಗೇ ಒರಸಿಕೊಂಡು ಹೊರಡಲು ತಯಾರಾದ.

ಪ್ರಯಾಣಕ್ಕೆ ದೊರ್ಸಾನಿ ಅಲಂಕಾರ ಮಾಡಿಕೊಂಡಳು. ರಾತ್ರಿ ಮಲಗುವಾಗ ತಲೆಗೆಲ್ಲಾ ಗುಂಗುರು ಮಾಡಿಕೊಳ್ಳುವ ಕ್ಲಿಪ್ಪುಗಳನ್ನು ಸಿಕ್ಕಿಸಿಕೊಂಡಳು. ಪಟ್ಟೆಪಟ್ಟೆಯ -ನೆಟ್‌ಗೌನು – ಈ ತಲೆಯ ಕ್ಲಿಪ್ಪುಗಳೊಡನೆ ದೊರ್ಸಾನಿ ಭಯಂಕರವಾಗಿ ಕಾಣುವಳು. ಆದರೆ ಕೇವಲ ಎರಡೇ ಗಂಟೆಗಳಲ್ಲಿ ಕ್ಲಿಪ್ಪುಗಳನ್ನು ಕಿತ್ತೆಸೆದು ನಾಲ್ಕೇ ಘಂಟೆಗಗಳಲ್ಲಿ ತನ್ನ ಮೇಕಪ್ಪನ್ನು ಮುಗಿಸಿ "ಐ ಯಂ ರೆಡಿ ಡಿಯರ್" ಎಂದು ಘಮ ಘಮಿಸುವ ಪುನಗಿನ ಬೆಕ್ಕಿನಂತೆ ಬಂದು ನಿಂತಳು. ಹುಕಿದ ಹೊಸ ಲಂಗ – ತಲೆಯನ್ನು ಹೊಸ ನಮೂನೆಯಾಗಿ ಕತ್ತರಿಸಿ ಕೊಂಡು ಹೈ ಹೀಲ್ಡಿಯಾಗಿ ಕೈಚೀಲದೊಡನೆ ಗುರುಗಳ ಪಕ್ಕದಲ್ಲಿ ಬಂದು ನಿಂತಳು.

ಗುರುಗಳು ಶಿಷ್ಯರೊಡನೆ ಈಯುಸ್ಟನ್ ಸ್ಟೇಷನ್‌ಗೆ ಹೊರಟರು ಅಂಡರ್ ಗ್ರೌಂಡ್ ರೈಲಿನಲ್ಲಿ ಪಿಕೆಡಲ್ಲಿ ಲೈನು ಹಿಡಿದು ಲಿಸ್ಟರ್ ಚೌಕದಲ್ಲಿಳಿದು – ನಾರದರ

ರೈಲಿನಲ್ಲಿ ಈಯೂಸ್ಟನ್ ಸ್ಟೇಷನ್ ತಲುಪುವ ಹೊತ್ತಿಗೆ ಸಾಕು ಸಾಕಾಗಿ ಹೋಯಿತು. ಲಂಡನ್ನಿನ ದೊಡ್ಡ ಸ್ಟೇಷನ್‌ಗಳಲ್ಲಿ ಇದೂ ಒಂದು. ಉತ್ತರ ಇಂಗ್ಲೆಂಡಿಗೆ ಹೋಗುವ ರೈಲುಗಳು ಇಲ್ಲಿಂದಲೇ ಹೊರಡುವುದು.

ದೊರ್‍ಸಾನಿ ವಿಚಾರಿಸಿ – ಬ್ಲಾಕ್ ಪೂಲಿಗೆ ನೇರವಾಗಿ ಹೋಗುವ ರೈಲು ನಾಲ್ಕು ಘಂಟೆಯಲ್ಲಿ ಹೊರಡುವುದೆಂದು ತಿಳಿಯಿತು. ಎಲ್ಲರಿಗೂ ಟಿಕೆಟ್ಟು ತೆಗೆದದ್ದಾಯಿತು. ಈ ಸಂದರ್ಭದಲ್ಲಿ ಮಡ್ಡಿ – ಮಡೆಯರಿಗೆ ಅರ್ಧ ಟಿಕೇಟು ಕೊಳ್ಳುವುದೆಂದು ಗುರುಗಳು ಹೇಳಿದರು ದೊರ್‍ಸಾನಿಗೆ ಅಚ್ಚರಿಯಾಯಿತು ಕತ್ತೆಗಾಗುವ ವಯಸ್ಸಿನ ಈ ಶಿಷ್ಯರಿಗೆ ಅರ್ಧ ಟಿಕೇಟು ಕೊಂಡರೆ ಡಬ್ಬಲ್ ವಸೂಲಿ ಮಾಡಿಯಾರೆಂದು ನಗೆಯಾಡಿದಳು.

“ ನಿಜಕ್ಕೂ ದೊರ್‍ಸಾನೀ ಅವರು ಕೇವಲ ಮಕ್ಕಳು - ಶಿಶುಗಳಿಗಿಂತಾ ಹೆಚ್ಚಿನವರಲ್ಲ – ದೇಹ ಬೆಳೆದಿದ್ದರೂ ಮನ-ತಲೆ-ಹೃದಯಗಳು ಕೇವಲ ಬಚ್ಚರಂತೆಯೇ ಇದೆ-ನಾನು ಯಾರನ್ನು ಬೇಕಾದರೂ ನಾನು ಈ ಬಗ್ಗೆ ಸಮಾಧಾನಗೊಳಿಸಬಲ್ಲೆ ”- ಎಂದರು.

“ ಡಿಯರ್ ಯುಲ್‌ಪ್ರೇ-ಟಿಕೇಟು ಪಡೆಯುವುದು ಪ್ರೇ ಬೆಳವಣಿಗೆಯ ಆಧಾರದ ಮೇಲಾದರೆ ನಿಮ್ಮಗಳೆಲ್ಲರನ್ನೂ ಪುಗಸಟ್ಟೆಯೇ ಕರೆದೊಯ್ಯಬೇಕು ”

“ ಎಲ್ಲಿಗೆ ಹುಚ್ಚಾಸ್ಪತ್ರೆಗಾ ? ” ಎಂದ ಮಂಕ.

ಈಯೂಸ್ಟನ್ ರೈಲ್ವೆ ಸ್ಟೇಷನ್ನು ಹಳೇಕಾಲದ್ದು ಹಾಗೇ ಕಾಪಾಡಿಕೊಂಡು ಬಂದಿದ್ದಾರೆ. ಕಲ್ಲಿದ್ದಲ ಹೊಗೆಯಿಂದ ಕಪ್ಪಾದ ಮೇಲ್ಛಾವಣಿ, ಗಿಮುಟಾದ ಗಾರೆ ನೆಲ-ಗಲಾಟೆಯೇ ಇಲ್ಲದ ಭಾಣ ಭಾಣ ರೈಲು: ನಮ್ಮೂರ H.A.L. ನಲ್ಲಿ ತಯಾರಾದ ರೈಲು ಬೋಗಿಗೂ-ಚಿಕ್ಕ ಜಾಜೂರು ಚಿತ್ರದುರ್ಗದ ರೈಲಿಗೂ ಇರುವ ಅಂತರವೇ ಇತ್ತು, ಈ ರೈಲಿಗೂ ಮತ್ತು ವಿಕ್ಟೋರಿಯಾ ಸ್ಟೇಷನ್‌ನಿಂದ ಹೊರಡುವ ಹೊಸ ರೈಲಿಗೂ ಇದ್ದ ವ್ಯತ್ಯಾಸ.

ಆದರೂ ಸರ್ಕಾರವೇ ವಹಿಸಿ ನಡೆಸುತ್ತಿರುವ ಈ ರೈಲು ಕಂಪನಿಯಲ್ಲಿ ಅಲ್ಲಿನ ಜನಕ್ಕೆ ತೃಪ್ತಿಯಿಲ್ಲ. ಯಾವ ಜನಕ್ಕೆ ತಾನೆ ತಮ್ಮ ಸರ್ಕಾರ ನಡೆಸುವ ವ್ಯವಹಾರಗಳಲ್ಲಿ ತೃಪ್ತಿ ಇರುತ್ತದೆ? ಅಚ್ಚುಗಟ್ಟಾದ ಕಂಪಾರ್ಟ್‌ಮೆಂಟನ್ನು ಹುಡುಕಿ ಹತ್ತಿದರು ಕೂಡುವ ಆಸನಗಳು ಸೊಗಸಾಗಿದ್ದುವು. ನೆಲಕ್ಕೆ ಜಮಖಾನೆ ಹಾಸಿದ್ದು-ಹೀಟರುಗಳುಳ್ಳ ಈ ಸಾಧಾರಣ ಎನಿಸಿಕೊಳ್ಳುವ ರೈಲೂ ನಮ್ಮ ರೈಲಿಗೆ ನೂರು ಪಾಲು ಉತ್ತಮವಿತ್ತು.

“ ಇಷ್ಟರಮಟ್ಟಿಗಾದರೂ ನಮ್ಮೂರ ರೈಲುಗಳು ಸುಧಾರಿಸಬೇಕು....,”-ಎಂದು ಮೂರನೆ ತರಗತಿಯಲ್ಲಿ ದನಗಳಂತೆ ನಿಂತು-ಕಿಟಿಕಿಗೆ ಜೋತು ಬಿದ್ದು ಕುರಿಗಳಂತೆ ಊರಿಂದೂರಿಗೆ ಸೇರುವ ತನ್ನೂರ ಪ್ರಯಾಣದ ಸುಖ ನೆನೆದು ಹೇಳಿದ ಮರುಳ.

“ ಆಶ್ಚರ್ಯ ಹೊತ್ತಿಗೆ ಸರಿಯಾಗಿ ರೈಲು ಹೊರಟು ಬಿಟ್ಟಿತು ! ”-ಎಂದು ಕೂಗಿದ ಮಂಕ.

“ ಇದರಲ್ಲೇನಾಶ್ಚರ್ಯ ಇಲ್ಲಿ ಎಲ್ಲಾ ರೈಲುಗಳೂ ಅಷ್ಟೆ-ಸಮಯ ಮೀರೊಲ್ಲ- ”

ನಮ್ಮಲ್ಲಿ ಸರಿಯಾದ ಹೊತ್ತಿಗೆ ಹೊರಟು-ನಿಯಮಿತ ಸಮಯಕ್ಕೆ ಬಂದರೆ ಅದೇ ಆಶ್ಚರ್ಯ.”

—ಬೃಹತ್ ಲಂಡನನ್ನು ದಾಟಿ ದೊಡ್ಡ ಕಾರ್ಖಾನೆಗಳ ಕೊಳವೆಗಳನ್ನು ದೂರ ಮಾಡಿ ಮೋಡ ಮುಚ್ಚಿದ್ದರೂ ಬಿಸಿಲಿಲ್ಲದ ಹಿತಕರ ವಾತಾವರಣದಲ್ಲಿ ಆಚೆ ಈಚೆ ಕಿಟಕಿಯಲ್ಲಿ ಇಂಗ್ಲೆಂಡಿನ ಪ್ರಕೃತಿ ಸೌಂದರ್ಯ ನೋಡುತ್ತಾ ಸಾಗಿದ್ದರು ಗಾಂಪ ರೊಡೆಯರು. ಚಿಕ್ಕ ಈ ಇಂಗ್ಲೆಂಡಿನಲ್ಲಿರುವಷ್ಟು ರೈಲುಗಳು ದೊಡ್ಡ ನಮ್ಮ ಭಾರತ ದಲ್ಲಿರಲಿಲ್ಲ ಎಂದೆನಿಸಿತು. ಸಾಲು ಸಾಲು ರೈಲು ಹಳ್ಳಿಗಳನ್ನೂ ಗಿರಿಗಳನ್ನೂ ಕೊರೆದು ಕಂದಕಗಳಿಗೆ ಸೇತುವೆ ಕಟ್ಟಿ-ವೇಗವಾಗಿ ಸ್ಟೇಷಗಳನ್ನು ದಾಟಿ ಸಾಗಿತ್ತು.

ದಾರಿಯಲ್ಲಿ ಹೆಚ್ಚು ಸ್ಟೇಷನ್‌ಗಳಲ್ಲಿ ನಿಲ್ಲದೆ ಸಾಗಿತ್ತು-ವೇಗ ಹೆಚ್ಚು ಎಂದೇ ಹೇಳಬೇಕು ಲಂಡನ್ನಿನಿಂದ ಬಿಟ್ಟು ಬ್ಲಾಕ್‌ಪೂಲ್ ತಲುಪಿದಾಗ ಊಟದ ಹೊತ್ತಾಗಿತ್ತು.

ದಸರಾದಲ್ಲಿ ಮೈಸೂರಿನಲ್ಲಿದ್ದ ಗುಜುಗುಂಪಲು ಜನಸಂದಣಿ ಸಂಭ್ರಮಗಳೇ ಇಲ್ಲೂ ಇತ್ತು. ಶನಿವಾರ ಭಾನುವಾರ ಬರುವ ‘ ವಾರದ ಕೊನೆ ’ ಮಜದ ಮಂದಿಗೆ ಬೇಕಾದ ಅಗತ್ಯ ಮನರಂಜನೆಗಾಗಿ ವಿಶಿಷ್ಟ ಏರ್ಪಾಟನ್ನೂ ಮಾಡಿದ್ದುದು ಕಾಣುತ್ತಿತ್ತು.

“ ಶುಕ್ರವಾರವೇ ಈ ಗಲಾಟೆ. ಇನ್ನು ಶನಿವಾರ ಭಾನುವಾರ ದೇವರೇ ಗತಿ ”-ಎಂದು ಸ್ಟೇಷನ್ನಿನಿಂದ ಊರುಗಳಿಗೆ ಕಾಲಿಡುತ್ತಿದ್ದಂತೆ ಕಂಡ ಜನಜಂಗುಳಿಯನ್ನು ನೋಡಿ ಬೆರಗಾದರು ಗುರುಗಳು. ಈ ಜನಗಳನ್ನು ನೋಡಿ ಆ ಮಂದಿಯೂ ಬೆರಗಾಗಿ ದಾರಿ ಬಿಟ್ಟರು. ಊರ ನಡುವಿನ ದೊಡ್ಡ ಗೋಪುರ ಮೊದಲು ಮನ ಸೆಳೆಯಿತು. ಪ್ಯಾರಿಸ್ಸಿನಲ್ಲಿರುವ ಭಾರೀ ಕಬ್ಬಿಣದ ಗೋಪುರದಂತೆಯೇ ಇದ್ದ ಇದು ಊರ ನಡುವೆ ಮುಗಿಲೆತ್ತರಕ್ಕೆ ಸೆಟೆದು ನಿಂತಿದೆ. “ ಇದೊಂದು ಬೃಹತ್ ನಿರ್ಮಾಣ ತುಟ್ಟ ತುದಿಗೆ ಐನೂರು ಅಡಿ ಏರಿ ಹೋಗಬಹುದು. ಇದಕ್ಕಾಗಿಯೇ ವಿಶೇಷ ಲಿಫ್ಟ್ ವ್ಯವಸ್ಥೆ ಇದೆ ಈ ಗೋಪುರದಡಿಯಲ್ಲಿಯೇ ಅಕ್ವೇರಿಯಂ ಎಂಬ ಜಲಚರ ಗಳ ಅಪೂರ್ವ ಸಂಗ್ರಹವಿದೆ. ಇಲ್ಲಿನ ಎಲ್ಲ ಮೋಜು-ಮನರಂಜನೆಗೂ ನಾನು ದಾರಿ ತೋರುವೆ ”-ಎಂದು ಗೈಡನೊಬ್ಬ ಬೆನ್ನು ಬಿದ್ದ.

“ ಇಲ್ಲಿ ಇಂಡಿಯನ್ ಹೋಟಲುಂಟೊ ? ”-ಎಂಹರು ಗುರುಗಳು

“ ಸೊಗಸಾದ ಹೋಟಲಿದೆ. ರೆಡ್ ಇಂಡಿಯನ್ ಹೋಟಲೆ ? ”

—ಎಂದ ಆತ   ತಾವಾವ ಇಂಡಿಯನರು?? ರೆಡ್ಡೀ?- ಈ ರೆಡ್ಡು-ಕೆಂಪು ಬಣ್ಣದ ಬಗ್ಗೆ ಆಗಾಗ ಕೇಳಿಬಲ್ಲರು ಗುರುಗಳು-ರೆಡ್ ಸ್ಟಾರ್, ರೆಡ್ಸ್-ರೆಡ್‌ಚೈನಾ-ರಷ್ಯಾವೆಲ್ಲಾ ರೆಡ್ಡು ಇತ್ಯಾದಿ ಕೇಳಿಬಲ್ಲರು. ಮಂಕನ ಮಾತೂ ಸ್ವಭಾವವೂ ರೆಡ್ಡು.

" ನಾವು ಇಂಡಿಯನ್ನರು ಮಾತ್ರ-ಇನ್ನೂ ರೆಡ್ಡಾಗಿಲ್ಲ. "

" ಬರೀ ಹೆಡ್ಡು ಮಾತ್ರ ಆಗಿದ್ದೇವೆ. "

" ಬಾಯಿ ಮುಚ್ಕೊ ಬಡ್ಡಿಕೇ...."

" —ಇಂಡಿಯರ್ನ-ಭಾರತ್‌ಮಾತಾಕಿ ಬಚ್ಚಾಸ್ ಅಮೆರಿಕದ ಇಂಡಿಯನ್ಸ್ ಅಲ್ಲ ಇಂಡಿಯಾದ ಹಿಂಡೂಸ್. "

" ಓ . ಇದೆ ಬನ್ನಿ ಇಲ್ಲೊಂದು ಹೋಟಲಿದೆ. "

—ಎಂದು ಈ ಗುಂಪನ್ನು ಆ ಗೈಡು ಕರೆದೊಯ್ದ. ದೊರ್ಸಾನಿ ಇಂಗ್ಲೆಂಡಿನಲ್ಲಿದ್ದರೂ ಈ ಕಡಲ ತೀರದ ವಿಹಾರ ಕೇಂದ್ರ ನೋಡಿರಲಿಲ್ಲ. ಇಲ್ಲೂ ಒಂದು ಹೆಣ್ಣು ಗೈಡಿನಿ ಸಿಕ್ಕಿದ್ದರೆ!! ಎಂದು ಆ ಧಡಿಯ ಗಂಡು ಗೈಡಿನ ಜೊತೆಗೇ ಹೊರಟಿತು ಗುಂಪು.

ಒಂದು ಕಡೆ ಕಡಲು-ಇನ್ನೊಂದು ಕಡೆ ಅಂಗಡಿ ಸಾಲು ಮನೆ ಹೋಟಲುಗಳ ಸಾಲು ನಡುವೆ ಇನ್ನೂರಡಿ ರಸ್ತೆ. ಸಾಲು ಸಾಲು ದೀಪಮಾಲೆ. ಕಡಲ ತೀರದ ಮರಳ ಮೇಲೆ ನೋಡಿದ ನೋಟ ಗಾಂಪರನ್ನು ಅಚ್ಚರಿಗೊಳಿಸಿತು. " ರಾತ್ರಿ ದೀಪ ಹಚ್ಚಿದಾಗ ನೋಡಿ "-ಎಂದ ಗೈಡು.

" ಇದೇನು ಸಂಸ್ಕೃತಿ-ಇದೇನು ಅಸಹ್ಯ-ಹೆಣ್ಣು ಗಂಡುಗಳೆಂಬ ಭೇದ ಬೇಡವೇ ?-ಒಂದು ಎರಡಾದರೆ ಏನೋ ಅನ್ನಬಹುದು ಊರಿಗೆ ಊರೇ ಬೆತ್ತಲೆ ತಿರುಗಿದರೆ ಲಂಗ ಹಾಕಿಕೊಂಡವರೇ ಮಂಗಗಳು. "

—ಎಂದು ಈಜು ದಿರಿಸು, ಬಿಕಿನಿ ಧರಿಸಿತಿದ್ದ ಶಾಕಿನಿ-ಡಾಕಿನಿ-ಲಂಖಿಣಿ-ಪದ್ಮಿನಿ ಸ್ತ್ರೀಯರ ಸಾಲು ಸಾಲನ್ನು ನೋಡಿದರು. ಹೋಟಲಿನಲ್ಲಿ ಮೇಜಿನ ಮುಂದೆ ಕೂಡುವ ಬದಲು ಈ ಹೆಣ್ಣುರಾಜ್ಯದ ನಡುವೆ ಜಮಖಾನ ಹಾಸಿ ಕೂಡುವುದೇ ಒಳ್ಳೆಯದೆಂದುಕೊಂಡರು.

ವೀಕ್ ಎಂಡ್ ಅಲ್ಲ-ಇದು ವೀಕು ಮನಸ್ಸಿನ ಹೆಂಡ ಕುಡಿವ ಚಟವೇ ಸರಿ ಇದು ವೀಕ್ ಹೆಂಡ್ ಎಂದುಕೊಂಡರು ಗಾಂಪರು.

ಗುರುಗಳೇ ಇದು ಸರಿಯಲ್ಲ-ನಮ್ಮ ಹೆಣ್ಣುಮಕ್ಕಳು ಸೆರಗು ಸರಿದರೇ ಹೆದರಿ ಭದ್ರವಾಗಿ ಮುಚ್ಚಿಕೊಳ್ಳುವರು. ಇದೇನು ಇವರು ಹೆಂಗಸರೆ! ಶಿವಶಿವಾ-ವೈ

ಮೇಲೆ ಆ ಚೂರು ಅರಿವೆಯನ್ನಾದರೂ ಯಾಕೆ ಕಟ್ಟಿಕೊಂಡಿದ್ದಾರೆ ಬಿಸಾಕಿಬಿಡಲಿ-ನಾಯಿನರಿಗಳಂತೆ ಬೆತ್ತಲೆ ತಿರಗಬಹುದು."

—ಎಂದು ಆ ಅರೆನಗ ನಾರೀವೃಂದವನ್ನು ನೋಡುತ್ತಲೇ ಮುಖ ತಿರುಗಿಸಿದ ಮಂಕ. ಗುರುಗಳು ಭಾರೀ ಗಾಂಭೀರ್ಯವನ್ನು ತಾಳಿದ್ದರು.

"ಇವತ್ತು ಶುಕ್ರವಾರವೇ ಹೀಗೆ-ನಾಳೆ ನಾಡಿದ್ದು ನೋಡಿವಿರಂತೆ ಇದಕ್ಕೆ ನೂರು ಪಾಲು ಜನ ಸೇರುತ್ತಾರೆ-ಮೋಜು ಎಂದರೆ ಇದಕ್ಕಿನ್ನ ಬೇಕು ನೆಚ್ಚಿನವಳೊಡನೆ ಸ್ವೇಚ್ಛೆಯಾಗಿ ಕಾಲ ಕಳೆಯುವುದಕ್ಕಿಂತ ಬೇರೆ ಸುಖವೇನಿದೆ" ಜೊತೆಗಿದ್ದ ಗೈಡು ಹೇಳಿದ್ದ.

"ಇದು ಸುಖವೇ!... ಶಿಷ್ಯರಿರಾ ನಾವು ಬೇಸತ್ತಿದ್ದೇವೆ. ವಾರಕ್ಕೊಮ್ಮೆ ನಮ್ಮ ಊರಿನ ವೀಕ್ ಎಂಡ್ ಎಂದರೆ ತುಪ್ಪದಾಂಜನೇಯ ಸೇವೆ-ಚಾಮುಂಡಮ್ಮನ ಸೇವೆ-ವೆಂಕಟರಮಣನ ಗುಡಿ-ಹೀಗೆ ದೇವರಿದ್ದಾನೆಂದು ನಂಬಿ ಅವನಿಗೆ ಕೈ ಮುಗಿದರೇ ನಮಗೆ ನೆಮ್ಮದಿ-ಅದೇ ಮೋಜು ಈ ದೈಹಿಕ ಆಕರ್ಷಣೆಯು ನಗ್ನ ಪ್ರದರ್ಶನ ಮೋಕ್ಷ ಸಾಧನವಲ್ಲ-ಚರ್ಚುಗಳಲ್ಲಿ ಕೆಲವೇ ಮಂದಿ ಬಂದು ಇಂತಹ ಮೋಜಿನ ಅಸಹ್ಯ ಕೂಟಕ್ಕೆ ನೂಕು ನುಗ್ಗಲಾಗಿರುವುದು ಇವರ ನೈತಿಕ ಮಟ್ಟ ತೋರಿಸುತ್ತದೆ."

"ಗುರುಗಳೇ ಇದರಲ್ಲಿಯೂ ಮೈ ಮರೆತು ಆನಂದದಲ್ಲಿ ತಮ್ಮನ್ನು ತಾವೇ ಮರೆಯುವ ಶಕ್ತಿ ಇಲ್ಲವೆ?"

"ಮರುಳಾ-ಇವರೂ ಮರುಳರು. ನಮ್ಮ ಸಂಸ್ಕೃತಿಯ ಮಟ್ಟದ ಅರಿವಾಗ ಬೇಕಾದರೆ ಇಲ್ಲಿನ ಜನಜೀವನದ ಮಟ್ಟ ನೋಡಬೇಕು. ಬರಿಯ ಆರ್ಥಿಕ ಹಿರಿಮೆಯೇ ಸೌಖ್ಯ ತರಲಾರದು-ನೋಡು ಈ ಜನ ಕಾರು, ಮನೆಯಲ್ಲಿ ರೆಫ್ರಿಜಿರೇಟರು-ವಾಷಿಂಗ್ ಮಿಷನ್ನು-ಟಿಲಿವಿಷನ್ನು-ಫೋನು-ಕಸ ಗುಡಿಸೋ ಮಿಷನ್ನು-ರತ್ನಗಂಬಳಿ-ಸೋಫ-ಮಂಚ-ನೈಲಾನ್ ಪರದೆ-ಒಂದೆ ಎರಡೆ ನೂರು ಬಗೆಯ ಸಾಧನಗಳು-ಇಷ್ಟಿದ್ದರೂ, ಕಡೆಗೆ ನಿಸರ್ಗದ ಕಡು ತೀರದಲ್ಲಿ ಹೇಗೆ ಹುಟ್ಟಿ ಬಂದರೋ ಹಾಗೆಯೇ ಕುಣಿಯಬೇಕೆಂಬ ಹಂಬಲ ನಮ್ಮ ಋಷಿಗಳೂ-ನಮ್ಮ ಜೀವನಕ್ಕೆ ವಿಶೇಷ ತಳಹದಿ ಹಾಕಿ ಈ ಮಟ್ಟದಿಂದ ಬಹು ಮೇಲೆ ಎತ್ತಿದ್ದರೆ-ನಮ್ಮ ಹಿರಿಯರಿಗೆ ನಾವು ಎಷ್ಟು ಋಣಿಗಳು"-ಎಂದು ಕ್ಷಣ ಕಾಲ ಗಾಂಪರೊಡೆಯರು ತಮ್ಮ ಸಂಸ್ಕೃತಿಯ ಮೇಲೆ ಪುಟ್ಟ ಭಾಷಣವನ್ನು ಮಾಡಿದರು.

ಶಿಷ್ಯರು ಗುರುಗಳು ಗಾಂಪ ಮಠದವರೆ! ಎಂದು ಮೂಗಿನಮೇಲೆ ಬೆರಳಿಟ್ಟರು.

" ಗುರುಗಳೇ-ನಮ್ಮ ಋಷಿಗಳೂ ಕೌಪೀನ ಧಾರಿಗಳು-ನಮ್ಮ ಋಷಿಕನ್ಯೆ ಯರೂ ಅರಿವೆಗೆ ಮಹತ್ವ ಕೊಟ್ಟಿರಲಾರರು-ಶಕುಂತಲೆ ಚಿತ್ರ ನೋಡಿದರೆ ಊಹಿಸ ಲಾರಿವೆ ? " ಮಂಕ.

" ಮಂಕಾ ಆ ಋಷಿಗಳು ಸಂಯಮದ ಮೂರ್ತಿಗಳು-ಅವರ ಅರಿವು-ಈ ಅರ ಅರಿವೆ ಧರಿಸಿದವರಿಗುಂಟೆ ? "

—ಎಂದು ತಮ್ಮ ಗಾಂಪ ದೃಷ್ಟಿಯನ್ನು ಕಣ್ಣು ಕಾಣುವವರೆಗೆ ಕಡಲ ದಂಡೆಯಮೇಲೆ ಹರಡಿದರು ಎಲ್ಲೆಲ್ಲೂ ಜನ-ಅರೆನಗ್ನ ಹೆಣ್ಣು ಗಂಡುಗಳು ತಮ್ಮ ತಮ್ಮ ಪ್ರಿಯ ಪ್ರಿಯಸಿರೊಡನೆ ಪ್ರೇಮ ಚೇಷ್ಟೆಗಳಲ್ಲಿ ತೊಡಗಿದ್ದರು.

" ವೀಕ್ ಹೆಂಡ್....ಈ ಮೈಯ್ಯ ಮೋಹ ವೀಕ್ ಮನಸ್ಸಿಗೆ ಹೆಂಡ ಕುಡಿಸಿದ ಹಾಗೇ...."

—ಎಂದು ದೊರ್ಸ್ವಾನಿಯ ಕೈಗೆ ತೆಕ್ಕೆ ಹಾಕಿಕೊಂಡು ಅಲ್ಲಿದ್ದ ಇಂಡಿಯನ್ ಹೋಟಲಿಗೆ ಹೋಗಿ-ಪರೋಟ-ಅನ್ನ ಉಪ್ಪಿನಕಾಯಿ-ಕರಿ-ಸಿಕ್ಕಿದ್ದಕ್ಕೆ ಕೇಕೆ ಹೊಡೆದರು. ತಮ್ಮ ಊಟಕ್ಕೆ ಇವರ ಮನವೂ ವೀಕೇ..!

—ದಾಶರಥಿ ದೀಕ್ಷಿತ್.



" ಹಿರಿಯ ವ್ಯಕ್ತಿಗಳೊಬ್ಬರು ನಿಧನರಾದಾಗ "

REG. NO. B. G. 343 KORAVANJI OCT. 1962.



Printed by B. S. Iyengar, Bangalore City.
Publisher—B. N. Gupta. Editor—M. Sivaram.